

VISWAKALYANAMARGA

विश्वकल्याणमार्गः

ವಿಶ್ವಕಲ್ಯಾಣಮಾರ್ಗ

PRACHARA KARYAKRAMA
AHOBILA MUTT, MELKOTE
Mandya District, Karnataka State

"This Book is published with the financial assistance of Thirumala Thirupathi Devasthanams under their scheme Aid to publish Religious Books."



NATHA MUNI
YAMUNA MUNI
Melkote

B.V. Anand Alwar.

VISWAKALYĀNAMARGA

विश्वकल्याणमार्गः

ವಿಶ್ವಕಲ್ಯಾಣಮಾರ್ಗ

B2

Written by

" DRAVIDOPANISHATH SĀRAGNA "

"द्रविडोपनिषत् सारज्ञः"

AHOBILMATAM ASTHANA VIDWAN
SAMPATHKUMARAN
Ahobil Mutt, Melkote

" This Book is published with the financial assistance of Thirumala Thirupathi Devasthanams under their scheme Aid to publish Religious Books."

1989

First Edition March 1989

2,000 Copies

Sundaram Charities—Rs. 500

Smt. Sahukar Gowramma—Rs. 300

All devotees who have helped for Pracharakaryam and Thadeeyardanam are blessed by H.H. 44th Jeeyar of Ahobil Mutt Srirangam Rajagopuram Alahiya-singar.

Price:

Help to Thadeeyardanam and Pracharakaryam

Printed At
Prabha Printing House, 22-A, Dr. D. V. Gundappa Road
Basavanagudi, Bangalore-4

ಬಿನ್ನಹ

ಕಲಾವಿದರು, ವಿದ್ವಾಂಸರು, ಜ್ಞಾನಿಗಳು ಇವರನ್ನು ಕಾರ್ಖಾನೆಗಳಲ್ಲಿ ತಯಾರುಮಾಡಲು ಯಾರಿಂದಲೂ ಸಾಧ್ಯವಿಲ್ಲ. ವೇದಾಂತಿಗಳಂತೂ ಬಹಳ ದುರ್ಲಭರು. ಅಂತಹವರ ಉಪನ್ಯಾಸಗಳನ್ನು ಕೇಳಿ ಅಥವಾ ಅವರ ಗ್ರಂಥಗಳನ್ನು ಕೊಂಡು ಸಹಕರಿಸಿ, ಅವರು ಜೀವಿಸಿರುವಾಗ ಅವರ ದರ್ಶನ ಮಾಡಿ ವಂದಿಸುವುದು ಒಳ್ಳೆಯದು. ಹಿರಿಯರ ಪುಸ್ತಕ ಗಳಿಂದಾಗುವ ಪ್ರಯೋಜನ ಅಪಾರವಾದುದು.

ಆದರೆ ಒಂದುಕಡೆ ಕಾಗದದ ಅಭಾವ, ಮತ್ತೊಂದುಕಡೆ ತಪ್ಪಿಲ್ಲದಂತೆ ಬರೆಯುವ ಲೇಖಕರ ಅಭಾವ, ಓದದವರಿಗೆ ಈ ಕೆಲಸ ಆಗುವುದಿಲ್ಲ, ಓದಿದವರು ಈ ಕೆಲಸಕ್ಕೆ ಬರುವುದಿಲ್ಲ. ಆಧ್ಯಾತ್ಮ ಪುಸ್ತಕಗಳಲ್ಲಿ ಬರುವ ಲಾಭ ಅಲ್ಪ. ವೈದ್ಯಕೀಯ, ತಾಂತ್ರಿಕ, ಕಾನೂನು ಪುಸ್ತಕಗಳಿಂದ ಬರುವಷ್ಟು ಲಾಭ ಇದರಲ್ಲಿ ಇರುವುದಿಲ್ಲ. ಆಧ್ಯಾತ್ಮ ಪ್ರಪಂಚ ಮುಳುಗಿ ಹೋದರೆ ಮನುಷ್ಯ ಆಧ್ಯಾತ್ಮ ಗ್ರಂಥಗಳನ್ನು ಓದದಿದ್ದರೆ, ಪ್ರಾಣಿಯ ಜ್ಞಾನಮಟ್ಟದಲ್ಲಿ ವ್ಯವಹರಿಸಬೇಕಾಗುತ್ತದೆ. ಈ ಕಾರಣದಿಂದ ಆಧ್ಯಾತ್ಮ ಜೀವನವನ್ನು ತೋರಿಸುವವರ ಗ್ರಂಥಗಳನ್ನು ಖಂಡಿತ ಕೊಂಡು ಸಹಕರಿಸಿ, ಮುಂದಿನ ಪೀಳಿಗೆಗೆ ನೀವು ಇಡಬೇಕಾದ ಸ್ಥಿರವಾದ ಆಸ್ತಿಯೇ ವಿವೇಕ. ಅದನ್ನು ಬೆಳೆಸುವ ಪುಸ್ತಕಗಳಿಗೆ ಪ್ರೋತ್ಸಾಹ ಕೊಡಿ. ತಂದೆ ತಾತಂದಿರು ಕಾಪಾಡಿದಂತಹ ಪುಸ್ತಕಗಳನ್ನು ಬಹಳ ಭಕ್ತಿಯಿಂದ ಕಾಪಾಡಿ ಪುಣ್ಯ ಬೆಳೆಸಿಕೊಳ್ಳಿ.

CONTENTS–ಏನೇನಿದೆ ?

Page 1 to 15

1. ಮನುಷ್ಯಜನ್ಮ ಬರುವುದು ಯಾರಿಗೆ ?

2. ಮನುಷ್ಯನಾಗಿ ಹುಟ್ಟಿದವನು ಮುಂದೇನಾಗುತ್ತಾನೆ ?

3. ಮನುಷ್ಯನಾದವನು ಜನ್ಮದ ಆರಂಭಕಾಲದಲ್ಲಿ ಹೇಗೆ ವರ್ತಿಸುತ್ತಾನೆ ?

4. ಜ್ಞಾನವಿಕಾಸ ಹೊಂದಿದವನು ಏನು ಮಾಡುತ್ತಾನೆ ?

5. ಕಾಣದವಸ್ತುವನ್ನು ತಿಳಿಯಲು ಹೋದವನಿಗೆ ಏನಾಗುತ್ತದೆ ?

6. ಜ್ಞಾನದೀಪವನ್ನು ಉಜ್ವಲಪಡಿಸುವವರು ಯಾರು ?

7. ಜಗತ್ತಿಗೆಲ್ಲಾ ಮಾನ್ಯನಾದ ಪರಮಗುರು ಯಾರು ?

8. ಅಂತಹ ಗುರು ಶ್ರೀಕೃಷ್ಣನ ಉಪದೇಶದಿಂದ ಆದ ಕೆಲಸವಾದರೂ ಏನು ?

9. ಜಗದ್ಗುರುವಿನ ಮಹತ್ವವನ್ನು ವಿವರಿಸಿರುವವರು ಇನ್ಯಾರು ?

10. ಹುಟ್ಟು ಸಾವುಗಳಿಂದ ಬಿಡುಗಡೆಗೆ ದಾರಿ ಇಲ್ಲವೆ ?

11. ವಿಶ್ವಕಲ್ಯಾಣಮಾರ್ಗ ಪ್ರವರ್ತಕರು ಶ್ರೀಯಾಮುನರ ಅಥವಾ ಆಳವಂದಾರ್‌ರವರ ಪರಿಚಯ. 16 to 18

12. ಪ್ರಬೋಧನೆಗೆ ಕಾರಣ 19

13. ಗೀತಾರ್ಥಸಂಗ್ರಹ ಪರಿಚಯ 21

14. ಗೀತಾರ್ಥಸಂಗ್ರಹ श्री गीतार्थसंग्रहः 24 to 47

15. YAMUNA AND HIS WORKS 48 to 53

16. ಸ್ತೋತ್ರರತ್ನ ಪರಿಚಯ 54 to 62
ಮತ್ತು ಅದರ ಸಾರ. ಸ್ತೋತ್ರರತ್ನ स्तोत्ररत्नं 63 to 109

17. ಶಾಂತಾಸ್ತೋತ್ರ कान्तास्तोत्रम् 110 to 113

18. GURUPARAMPARA 114

ಪ್ರಕಟಣೆ

ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರವು ಮತ್ತು ಶ್ರೀ ಶಂಕರ ಜಯಂತಿಯು ಸಾಮಾನ್ಯವಾಗಿ ಬೇಸಗೆ ರಜಾದಿನದಲ್ಲಿ ಬರುವುದರಿಂದ ಮಾತಾಪಿತೃಗಳು ತಮ್ಮ ಮಕ್ಕಳೊಂದಿಗೆ ಮೇಲುಕೋಟೆ ಕ್ಷೇತ್ರದಲ್ಲಿ ಕನಿಷ್ಠ ಹದಿನೈದು ದಿನಗಳಾದರೂ ಇದ್ದು ಶ್ರೀವೈಷ್ಣವ ಸಂಪ್ರದಾಯಕ್ಕೆ ಬೇಕಾಗಿಯೇ ಇರುವ ಸಂಧ್ಯಾವಂದನೆ, ದೇವರ ಪೂಜಾ, ಶಾತ್ತುಮರೈ ಹಾಡುಗಳು, ಅವಶ್ಯ ಸ್ತೋತ್ರಗಳನ್ನು ವಯೋಮಿತಿ ಇಲ್ಲದೆ ಎಲ್ಲರೂ ಕಲಿತು ಅಥವಾ ಶ್ರವಣ ಮಾಡಿ ಉಜ್ಜೀವನರಾಗಲಿ. ಈ ಸಂದರ್ಭದಲ್ಲಿ ಎರಡು ಹೊತ್ತು ಊಟ ಮತ್ತು ವಸತಿ ಸೌಕರ್ಯಗಳನ್ನು ಮಾಡಲಾಗುತ್ತದೆ. ಪ್ರತಿ ವರ್ಷವೂ ಮುಖ್ಯವಾದ ಚಿಕ್ಕ ಪುಸ್ತಕಗಳನ್ನು ಮತ್ತು ಚಾರ್ಟುಗಳನ್ನು ಪ್ರಿಂಟು ಮಾಡಿಸಿ ಉಚಿತವಾಗಿಯೇ ಹಂಚುವ ಉದ್ದೇಶವಿದೆ.

ಅನ್ನದಾನಕ್ಕೂ ವಿದ್ಯಾದಾನಕ್ಕೂ ಮತ್ತು ಧರ್ಮಪ್ರಚಾರ ಕಾರ್ಯಗಳಿಗೆ ತಮ್ಮ ಉದಾರವಾದ ದ್ರವ್ಯ ಸಹಾಯವನ್ನೂ ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಲಾಗಿದೆ.

REPRESENTATIVE
AHOBIL MUTT
MELKOTE, MANDYA DIST

॥ श्रीः ॥

॥ विश्वकल्याणमार्गः ॥

ವಿಶ್ವಕಲ್ಯಾಣಮಾರ್ಗ

ಶ್ರೀಮತೇ ಲಕ್ಷ್ಮೀಪರಬ್ರಹ್ಮಣೇ ನಮಃ
ಅಸ್ಮತ್ ಗುರುಭ್ಯೋ ನಮಃ ।
ಅಸ್ಮತ್ ಪರಮಗುರುಭ್ಯೋ ನಮಃ ।
ಅಸ್ಮತ್ ಸರ್ವಗುರುಭ್ಯೋ ನಮಃ ।

ಲಕ್ಷ್ಮೀನಾಥ ಸಮಾರಂಭಾಂ ನಾಥಯಾಮುನ ಮಧ್ಯಮಾಂ ।
ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಂ ॥
ಯತ್ಪದಾಂಭೋರುಹಧ್ಯಾನ ವಿಧ್ವಸ್ತಾಶೇಷಕಲ್ಮಷಃ ।
ವಸ್ತುತಾಮುಪಯಾತೋಽಹಂ ಯಾಮುನೇಯಂ ನಮಾಮಿ ತಂ ॥

ಯೋ ನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ
ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ ।
ಅಸ್ಮದ್ಗುರೋರ್ಭಗವತೋಽಸ್ಯದಯೈಕಸಿಂಧೋ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥

ವಿಶ್ವಕಲ್ಯಾಣಮಾರ್ಗ

ಮಹಾಪ್ರಭೋ, ಶ್ರೀಮನ್ನಾರಾಯಣ, ನಿನ್ನ ಪ್ರೇರಣೆಯಂತೆ ಜಗತ್ಕಲ್ಯಾಣಕ್ಕಾಗಿ, ಶಾಸ್ತ್ರಪುರಾಣೇತಿಹಾಸಗಳಲ್ಲಿಯೂ, ಭಾಗವತರು ಮತ್ತು ಸದ್ಗುರುಗಳ ಮೂಲಕವಾಗಿಯೂ ಓದಿ ಕೇಳಿ ತಿಳಿದುಕೊಂಡ ವಿಷಯಗಳನ್ನು ಈ ಕೆಳಗೆ ನಿರೂಪಿಸಿ, ಮಾನವ ಕುಲಕ್ಕೆ ತಿಳಿವಳಿಕೆಯುಂಟಾಗಲೆಂದು ಆಶಿಸಿ, ನಿನ್ನ ಪದಕಮಲಗಳಲ್ಲಿ ಸಮರ್ಪಿಸುತ್ತಿದ್ದೇನೆ.

ಭಗವನ್, ನಿನ್ನ ವಾಣಿಯು ವೇದರಾಶಿಯಾಗಿ ಭಾರತ ಭೂಮಿಯ ಹಿಂದೂ ಸಮಾಜದಲ್ಲಿ ವಿಜೃಂಭಿಸುತ್ತಿದ್ದು, ಈಗ ಪ್ರಪಂಚದ ಅಷ್ಟದಿಕ್ಕುಗಳಿಗೂ ಪ್ರಸರಿಸಿ, ವೇದಬಾಹಿರರನ್ನೆಲ್ಲಾ ವೇದಜ್ಞಾನದ ಕಕ್ಷೆಗೆ ಸೆಳೆಯುತ್ತಿದೆ. ಹಾಗೆ ಸೆಳೆಯುತ್ತಿರುವಾಗ ಬಹುಮುಖ್ಯವಾಗಿ ಕಂಗೊಳಿಸುವ ವಾಕ್ಯ ಹೀಗಿದೆ—"ಓಂ ಶಾಂತಿಃ। ಓಂ ಶಾಂತಿಃ। ಓಂ ಶಾಂತಿಃ।".

ಶಾಂತಿಪದವನ್ನು ಮೂರಾವರ್ತಿ ಉಚ್ಚರಿಸಿರುವುದು, ಮನುಷ್ಯನು ಕಾಯಾ ವಾಚಾ ಮನಸಾ ಈ ಹಂಬಲಿನಲ್ಲಿದ್ದು, ಅದನ್ನು ಸಾಧಿಸಲೋಸುಗ ಪ್ರತಿವ್ಯಕ್ತಿಯೂ ಈ ಸಾಧನೆಯಲ್ಲಿ ತೊಡಗಿದಾಗ ಆಗುವ ಫಲವನ್ನು ಹೀಗೆ ಹೇಳಿದೆ—

ಸರ್ವೇ ಜನಾಃ ಸುಖಿನೋ ಭವಂತು ।
ಸಮಸ್ತಸನ್ಮಂಗಳಾನಿ ಭವಂತು ॥

ತನ್ನ ಸ್ವಾರ್ಥ, ಕುಟುಂಬದ ಸ್ವಾರ್ಥ ಕುರಿತು ಯೋಚಿಸದೆ, ವಿಶ್ವದ ಸರ್ವರ ಯೋಗಕ್ಷೇಮವನ್ನು ಕುರಿತು ಹೇಳುತ್ತದೆ. ಈ ವೇದ ಮಾರ್ಗವೇ ಪ್ರಪಂಚದ ಅಭ್ಯುತ್ಥಾನ - ಅಭಿವೃದ್ಧಿಗೆ ದಾರಿದೀಪ, ಕಲ್ಯಾಣ ಮಾರ್ಗ.

ವಿಶ್ವದಲ್ಲಿ ಕಂಗೊಳಿಸುವ ಸಮಸ್ತವನ್ನೂ ಚರಾಚರಗಳೆಂದು ವಿಂಗಡಿಸಬಹುದಾಗಿದೆ. ಈ ಚರಾಚರ 'ಪ್ರಪಂಚದ ಸೂತ್ರಧಾರಿ' ಶ್ರೀಮನ್ನಾರಾಯಣನು ಮಾನವನ ಆವಿಷ್ಕಾರವನ್ನು ಹೇಗೆ ಏರ್ಪಡಿಸಿರುವನೆಂಬುದನ್ನು ಪ್ರಶ್ನೋತ್ತರಗಳ ಮೂಲಕ ಹೀಗೆ ತಿಳಿಸಬಹುದು.

1. ಮನುಷ್ಯ ಜನ್ಮ ಬರುವುದು ಯಾರಿಗೆ?

ಜೀವನು ಮಲಮೂತ್ರಗಳಲ್ಲಿರುವ ಹುಳುವಿನಿಂದ ಆರಂಭವಾಗಿ, ಅವುಗಳನ್ನು ತಿನ್ನುವ ಪ್ರಾಣಿಗಳನ್ನು ಉತ್ತಮ ಶರೀರವೆಂದು ತಿಳಿದು, ಕ್ರಮವಾಗಿ ಹಾವುಗಳೇ ಮೊದಲಾದ ಸರೀಸೃಪಾದಗಳಾಗಿ, ನಂತರ ಅಂತಿಮ ಸ್ಮೃತಿಬಲದಿಂದ ಪಕ್ಷಿಗಳಾಗಿ, ಅಂದರೆ ಗುಬ್ಬಚ್ಚಿಯಿಂದ ಗರುಡನವರೆಗೆ, ಜನ್ಮವೆತ್ತಿ, ನಂತರ ನಾಲ್ಕು ಕಾಲಿನ ಪ್ರಾಣಿಗಳಾಗಿ, ಅಂದರೆ ಬೆಕ್ಕಿನಿಂದ ಸಿಂಹದವರೆಗೆ, ಚತುಷ್ಪಾದ ಪ್ರಾಣಿ ಜನ್ಮವೆತ್ತಿ, ನಂತರ ಅವುಗಳ ಪ್ರಾಣವಿಯೋಗ ಕಾಲದಲ್ಲಿ ತಮ್ಮ ನಿತ್ಯಜೀವನದಿಂದ, ಅದಕ್ಕೆ ಉತ್ತಮವಾದ ಜನ್ಮವೇನೆಂದು ಭ್ರಮಿಸಿ ತಿಳಿದು, ಬೇರೆ ಬೇರೆ ಶರೀರ

ಗಳನ್ನು ಹೊಂದಿ, ಕೊನೆಗೆ ಪ್ರಾಣವಿಯೋಗ ಕಾಲದಲ್ಲಿ ವಿಕಾಸಹೊಂದಿದ ಜ್ಞಾನಬಲದಿಂದ, ಉತ್ತಮ ಜನ್ಮವಾದ ಮನುಷ್ಯ ಜನ್ಮವನ್ನು ಹೊಂದಿ ವಿರಾಜಿಸುತ್ತಾನೆ.

2. ಮನುಷ್ಯನಾಗಿ ಹುಟ್ಟಿದವನು ಮುಂದೇನಾಗುತ್ತಾನೆ?

ಮನುಷ್ಯನು ಬುಭುಕ್ಷುವಾಗಿಯೋ, ಮುಮುಕ್ಷುವಾಗಿಯೋ ತನ್ನ ಬದುಕನ್ನು ರೂಢಿಸಿಕೊಳ್ಳುತ್ತಾನೆ. ಆಗ ಮನುಷ್ಯ ಜೀವಿಗೂ ಇತರ ಜೀವಿಗಳಿಗೂ ಇರುವ ವ್ಯತ್ಯಾಸವನ್ನು ತಿಳಿಯುತ್ತಾನೆ. ಶರೀರಾಂತರ್ಗತ ವಾದ ಕರ್ಮೇಂದ್ರಿಯಗಳೂ, ಜ್ಞಾನೇಂದ್ರಿಯಗಳೂ, ತನ್ನಲ್ಲೂ, ಇತರ ಜೀವಿಗಳಲ್ಲೂ ಹೇಗೆ ಕಾರ್ಯಶೀಲವಾಗುತ್ತವೆ ಎಂಬುದನ್ನು ಗಮನಿಸುತ್ತಾನೆ. ಹಾಗೆ ಗಮನಿಸುವಾಗ ಮನಸ್ಸಿನ ಪ್ರೇರಣೆ, ಇಂದ್ರಿಯಗಳ ಚಟುವಟಿಕೆ, ಇವುಗಳಿಂದ ಸೆಳೆಯಲ್ಪಟ್ಟು ಪ್ರವೃತ್ತಿ ಹೊಂದುವ ಶರೀರಾಂತರ್ವರ್ತಿಯಾದ ಜೀವ–ಇವುಗಳೆಲ್ಲವನ್ನೂ ತನ್ನ ಬುದ್ಧಿಕಾರ್ಯದಿಂದ ತಿಳಿದು, ಬುದ್ಧಿಯ ವಿಶಿಷ್ಟ ಗುಣವಾದ ವಿವೇಚನೆಯನ್ನು ಚುರುಕುಗೊಳಿಸಿ, ಐಹಿಕಾ ಮುಷ್ಮಿಕಗಳನ್ನು ತಿಳಿದು, ಬುಭುಕ್ಷುತ್ವಕ್ಕಿಂತ ಮುಮುಕ್ಷುತ್ವವೇ ಮೇಲು, ಅದು ಇಹಪರಸಾಧನ ಎಂದು ತಿಳಿಯುತ್ತಾನೆ. ಹೀಗೆ ತಿಳಿಯುವವರು ವಿರಳ. ಆದರೂ

"ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।"

(ಗೀತಾ 7–3)

"ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ।"

(ಗೀತಾ 6–40)

"ಸೋऽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ।"

(ಗೀತಾ 10–7)

ಎಂಬಂತೆ ಸಾಧನೆಗೆ ತೊಡಗಿದವನು ಜನ್ಮ ಜನ್ಮಾಂತರದಲ್ಲಾದರೂ ಸಾಧಿಸಿಯೇ ತೀರುತ್ತಾನೆ.

3. ಮನುಷ್ಯನಾದವನು ಜನ್ಮದ ಆರಂಭಕಾಲದಲ್ಲಿ ಹೇಗೆ ವರ್ತಿಸುತ್ತಾನೆ?

"ಆಹಾರ ನಿದ್ರಾ ಭಯ ಮೈಥುನಾದಿ"ಗಳು ಪ್ರಾಣಿ ಸಮುದಾಯಕ್ಕೂ ಮನುಷ್ಯನಿಗೂ ಸಮ. ಆದರೆ ಇವುಗಳನ್ನೆಲ್ಲಾ ಭೋಗವಾಗಿ ಭಾವಿಸಿದಾಗ, ಮನುಷ್ಯನು ಅವುಗಳ ಗಳಿಕೆಗಾಗಿ ತನ್ನ ದೇಹಬಲ, ಬುದ್ಧಿಬಲಗಳನ್ನು ಉಪಯೋಗಿಸಿ, ವಿಧವಿಧವಾದ ಭೋಗ ಸಾಮಗ್ರಿಗಳನ್ನೂ, ಭೋಗಿಸುವ ವಿಧಾನಗಳನ್ನೂ ರೂಪಿಸಿಕೊಂಡು ವಿಹರಿಸುತ್ತಾನೆ, ಮೆರೆಯುತ್ತಾನೆ. ಆದರೆ ಈ ಭೋಗಭಾಗ್ಯಗಳ ಚಂಚಲತೆ, ಅಸ್ಥಿರತೆಗಳನ್ನು ಬುದ್ಧಿವಂತನಾದವನು ಗಮನಿಸಿ, ಚಿಂತಾ ಪ್ರಜ್ಞನಾಗಿ ಮುಂದುವರೆದು ಪ್ರಬುದ್ಧ ಜೀವನಾಗುತ್ತಾನೆ, ಜ್ಞಾನೋದಯ ಹೊಂದಿದವನಾಗುತ್ತಾನೆ, ಜ್ಞಾನವಿಕಾಸ ಹೊಂದಿದವನಾಗುತ್ತಾನೆ.

4. ಜ್ಞಾನವಿಕಾಸ ಹೊಂದಿದವನು ಏನು ಮಾಡುತ್ತಾನೆ?

ಭೋಗ, ಭೋಗೋಪಕರಣ, ಭೋಗವಸ್ತು ಇವುಗಳ ವಿವೇಚನೆಯಿಂದ, ಹಾಗೆಯೇ ತನ್ನ ಶರೀರ, ಇಂದ್ರಿಯಗಳನ್ನು ಕುರಿತು ವಿವೇಚಿಸುವುದರಿಂದ, ವಿಶ್ವದ ಆಗುಹೋಗುಗಳು, ಉತ್ಪತ್ತಿ, ಉಳಿವು, ಅಳಿವುಗಳು ಹೇಗೆ ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ ಎಂಬ ಪಂಚಭೂತಗಳಿಂದ ಆಗಿ, ಅವುಗಳ ಅರಿವು, ಅವುಗಳ ಗುಣಗಳಾದ ಗಂಧ, ರಸ, ರೂಪ, ಸ್ಪರ್ಶ, ವರ್ಣಗಳು ನಮ್ಮ ಜ್ಞಾನೇಂದ್ರಿಯಗಳ ಮೂಲಕ ಆಗುತ್ತದೆಂದು ತಿಳಿದು, ಇವುಗಳು ಹೇಗೆ ಪರಿವರ್ತನಶೀಲ, ಚಂಚಲ, ನಶ್ವರ ಎಂದು ವಿಚಾರ ಮಂಥನದಿಂದ ತಿಳಿದವನಾಗುತ್ತಾನೆ. ಹಾಗೆಯೇ ಇವೆಲ್ಲಕ್ಕೂ ಯಾವುದಾದರೂ ಕಾರಣವಸ್ತುವಿದೆಯೇ, ಇದ್ದರೆ ಅದು ಯಾವುದು ಎಂದು ತಿಳಿಯಲು ಸದಾ ಹವಣಿಸುತ್ತಾನೆ.

5. ಕಾರಣವಸ್ತುವನ್ನು ತಿಳಿಯಲು ಹೊರಟವನಿಗೆ ಏನಾಗುತ್ತದೆ?

ಕತ್ತಲಲ್ಲಿ ಹುಡುಕುವವನಿಗೆ ದೀಪವು ಹೇಗೋ ಹಾಗೆ ಕಾರಣವನ್ನು ಹುಡುಕುವವನಿಗೆ, ಆ ಕಾರಣವಸ್ತುವಾದ ಪರಮಾತ್ಮನೇ ಜ್ಞಾನದೀಪವನ್ನು ಕೊಟ್ಟು ಕರುಣಿಸುತ್ತಾನೆ.

6. ಜ್ಞಾನದೀಪವನ್ನು ಉಜ್ವಲ ಪಡಿಸುವವರು ಯಾರು ?

ಕುರುಡನು ನಡೆಯುವಾಗ ಇನ್ನೊಬ್ಬನ ಸಹಾಯವನ್ನು ಪಡೆಯುವಂತೆ, ಜ್ಞಾನದೀಪವನ್ನು ಪ್ರಜ್ವಲಗೊಳಿಸಲು ಪ್ರಾಜ್ಞರ, ಶಾಸ್ತ್ರಜ್ಞಾನದ, ಸಂಪ್ರದಾಯನಿಷ್ಠರ, ಸಹಾಯವನ್ನು ಹೊಂದಬೇಕು. ತಾನು ತಿಳಿದು, ಇತರರಿಗೆ ತಿಳಿವಳಿಕೆ ಕೊಡುವವನು ಆಚಾರ್ಯ, ಆತನೇ ಗುರು. 'ಗು' ಎಂದರೆ ಅಂಧಕಾರ, 'ರು' ಎಂದರೆ ಹೋಗಲಾಡಿಸುವವನು. ಆ ಗುರುವಿಗೆ "ಕರಗ್ರಹಣ ವಿಚಕ್ಷಣ" ಎಂದು ಬಿರುದು. ದೇಹಾತ್ಮ ಭ್ರಮೆ, ಇಂದ್ರಿಯಾತ್ಮ ಭ್ರಮೆ, ಮನಸ್ಸು ಪ್ರಾಣಗಳೇ ಆತ್ಮ ಎಂಬಿವೇ ಮುಂತಾದ ಭ್ರಮಾಂಧಕಾರಗಳನ್ನು ಹೋಗಲಾಡಿಸಿ, ದೇಹೇಂದ್ರಿಯಾದಿ ವಿಲಕ್ಷಣನಾದ ಆತ್ಮ, ದೇಹೇಂದ್ರಿಯಾತಿರಿಕ್ತನಾದ ಆತ್ಮ, "ಆತ್ಮದಾಸ್ಯಂ ಹರೇಃ ಸ್ವಾಮ್ಯಂ" ಜ್ಞಾನವನ್ನು ಸ್ವತಃ ತಿಳಿದು, ತಿಳಿಯದವರಿಗೆ ತಿಳಿಸಿ ಕೊಡುವವನು ಆಚಾರ್ಯ, ಸದ್ಗುರು. ಹಂಬಲಿಸುವ ಶಿಷ್ಯನಿಗೆ, ಅವನು, ಭಗವಂತನ ಕರುಣೆಯಿಂದ ತಾನಾಗಿಯೇ ದೊರಕುತ್ತಾನೆ.

7. ಜಗತ್ತಿಗೆಲ್ಲಾ ಮಾನ್ಯನಾದ ಪರಮ ಗುರು ಯಾರು ?

ಅಂಧಕಾರವನ್ನು ಕಳೆಯುವವನು ಗುರು. ತಾನು ಶ್ರೇಷ್ಠ, ತಾನು ಬುದ್ಧಿವಂತ, ತಾನು ಪರಾಕ್ರಮಿ ಎಂದು ಭಾವಿಸಿ ಮುನ್ನುಗ್ಗಿ, ಮೇಲೆ ಮೇಲೆ ಪ್ರಶ್ನೆಗಳನ್ನು ಕೇಳಿದರೂ, ಆತನ ಅಹಂಭಾವವನ್ನು ಹೋಗಲಾಡಿಸಿ, ಸಮಾಧಾನವಾಗಿ ಎಲ್ಲ ವಾದಗಳಿಗೂ ಉತ್ತರಿಸಿ, ಮನಸ್ಸಿಗೆ ಸಮಾಧಾನ

ತರಿಸಿ, ಅಂಥವನಲ್ಲಿ ಬೇಸರಿಸದೆ, ಸರಿಯಾದ ವಿಚಾರ ಮಾರ್ಗಕ್ಕೆ ಎಳೆ ತರುವವನೇ ಪರಮ ಗುರು. ವಾದ ಮಾಡುವುದರಲ್ಲಿ, ಪ್ರಶ್ನೆಗಳ ಸುರಿಮಳೆ ಗರೆಯುವುದರಲ್ಲಿ, ಸಂದೇಹಗಳನ್ನು ತೋಡಿಕೊಳ್ಳುವುದರಲ್ಲಿ, ಅರ್ಜುನನಿಗೆ ಮಿಗಿಲಾದವರಿಲ್ಲ. ಅಂಥವನನ್ನು ಯುಕ್ತಿವಾದಗಳಿಂದ ತಿಳಿವಿನ ಹೊಳೆ ಹರಿಸಿ "ನಷ್ಟೋ ಮೋಹಃ ಸ್ಮೃತಿರ್ಲಬ್ಧಾ" "ಸ್ಥಿತೋಽಸ್ಮಿ ಗತಸಂದೇಹಃ" ಎಂದೆಲ್ಲಾ ಹೇಳುವಂತೆ ಮಾಡಿದ ಗೀತಾಚಾರ್ಯನಾದ, ದೇವಕೀನಂದನ ನಾದ, ಶ್ರೀ ಕೃಷ್ಣನೇ ಪರಮ ಗುರು.

ವಸುದೇವಸುತಂ ದೇವಂ ಕಂಸಚಾಣೂರಮರ್ದನಂ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥

ಈ ಜಗದ್ಗುರುವೇ ಸೃಷ್ಟಿ ಸ್ಥಿತಿ ಲಯಕರ್ತ, ಬ್ರಹ್ಮ ವಿಷ್ಣು ಮಹೇಶ ವಿಷ್ಣುಸಹಸ್ರನಾಮದಲ್ಲಿ ಭೀಷ್ಮನು ಶ್ರೀಕೃಷ್ಣನನ್ನು ಕುರಿತು ಹೇಳುವಾಗ ಅವನನ್ನು "ವಿಶ್ವಂ ವಿಷ್ಣುಃ" ಎಂದು ಆತನ ಸೃಷ್ಟಿಕರ್ತೃತ್ವವನ್ನೂ, "ವೃಷಾಹೀ ವೃಷಭೋ ವಿಷ್ಣುಃ" ಎಂದು ಆತನ ರಕ್ಷಕತ್ವವನ್ನೂ, "ಅನಂತ ಭುಕ್ ವಿಷ್ಣುಃ" ಎಂದು ಆತನ ಸಂಹಾರಕತ್ತ್ವವನ್ನೂ ವಿವರಿಸಿದ್ದಾನೆ. ಆ ಜಗದ್ಗುರು ಕೃಷ್ಣನಾದರೋ ಸಕಲ ಲೋಕಗಳಲ್ಲಿಯೂ ವ್ಯಾಪ್ತಿ ಹೊಂದಿದವನಾಗಿ ಜಿಜ್ಞಾಸುಗಳಿಗೆ,

ತೇಷಾಮೇವಾನುಕಂಪಾರ್ಥಂ ಅಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥

(ಗೀತಾ 10–11)

ಎಂಬಂತೆ ತನ್ನನ್ನು ನಂಬಿ ಭಜಿಸುವವರನ್ನು ಅನುಗ್ರಹಿಸಲು ತಾನು ಅವರ ಮನಸ್ಸಿಗೆ ಗೋ ಚ ರಿ ಸಿ, ಅವರ ಕರ್ಮವಿಪಾಕದಿಂದ ಉಂಟಾಗಿರುವ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ, ಕಾಪಾಡುವುದಾಗಿ ಅಭಿವಚನ ವಿತ್ತಿದ್ದಾನೆ. ಅಂಥ ಗೀತಾಚಾರ್ಯನಾದ ಶ್ರೀಕೃಷ್ಣನಿಗೆ ಸಮರೂ, ಅಧಿಕರೂ ಯಾರೂ ಇಲ್ಲ. ಅಂಥ ಆಚಾರ್ಯನೇ ಪರಮ ಗುರು ಹಾಗೂ ಜಗದ್ಗುರು. ಆತ ಶ್ರೀಕೃಷ್ಣ ಒಬ್ಬನೇ.

8. ಅಂತಹ ಗುರು ಶ್ರೀಕೃಷ್ಣನ ಉಪದೇಶದಿಂದ ಆದ ಕೆಲಸವಾದರೂ ಏನು ?

ವಿಷಾದದಿಂದ ದೀನನೂ, ಮೋಹಾವಿಷ್ಟನೂ, ನಷ್ಟಪ್ರಜ್ಞನೂ ಆದ ಅರ್ಜುನನಿಗೆ, ಕೃಷ್ಣನ ಗೀತೋಪದೇಶದಿಂದ, ತನ್ನ ಮೊದಲಿನ ಭಾವನೆಗಳಾದ "ನ ಕಾಂಕ್ಷೇ ವಿಜಯಂ ಕೃಷ್ಣ, ನ ಚ ರಾಜ್ಯಂ ಸುಖಾನಿ ಚ" ಅಂದರೆ ಜಯವೂ ಬೇಡ, ರಾಜ್ಯವೂ ಬೇಡ, ಸುಖವೂ ಬೇಡ ಎಂದು ವೈರಾಗ್ಯ ಹೊಂದಿದ್ದವನು,

"ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥

(ಗೀತಾ 18–73)

ಅಂದರೆ ಮೋಹ ಹೋಯಿತು. ಜ್ಞಾನ ಉಂಟಾಯಿತು, ಸಂದೇಹಗಳು ನಾಶವಾದುವು, ನೀನು ಹೇಳಿದಂತೆ ಮಾಡುತ್ತೇನೆ, ಎಂದು ಹೇಳಿ ದೀರ್ಘದಂಡ ಪ್ರಣಾಮ ಮಾಡಿ, ಬಿ ಸಾ ಡಿ ದ್ದ ಗಾಂಡೀವವನ್ನು ಕೈಗೆತ್ತಿಕೊಂಡು ಉತ್ಸಾಹ ತುಂಬಿದವನಾಗಿ, ತನ್ನ ಕರ್ತವ್ಯ ನಿರ್ವಹಣೆಗಾಗಿ ಎದ್ದು ನಿಂತ ಅರ್ಜುನ. ಇಂಥಾ ಲೋಕ ವಿಸ್ಮಯವಾದ ಪ್ರಭಾವವನ್ನು ಬೀರತಕ್ಕವನು ಪರಮ ಗುರು.

ಪ್ರತಿಯೊಬ್ಬನ ಮನಸ್ಸಿನ ಕುರುಕ್ಷೇತ್ರದಲ್ಲಿ, ವಿಷಾದದಿಂದ ತುಂಬಿದ ಜೀವಿಯನ್ನು ಹುರಿದುಂಬಿಸುವುದೇ ಆಗುವ, ಆಗಬೇಕಾದ ಮಹತ್ಕಾರ್ಯ. ಇದು ಜಗದ್ಗುರುವಿನ ಕೆಲಸ. ಕವಿತಾರ್ಕಿಕಸಿಂಹರೂ, ವೇದಾಂತಾಚಾರ್ಯರೂ ಆದ ಆಚಾರ್ಯ ಶ್ರೇಷ್ಠರು ಭಗವದ್ಗೀತೆಯನ್ನು 'ವಿಪಶ್ಚಿದವಿಗೀತಯಾ ಜಗತಿ ಗೀತಯಾ" ಎಂದು ಕೊಂಡಾಡಿದ್ದಾರೆ. ಈ ಗೀತೆಯು ಅನುಗೀತಾ, ಗೋಪಿಕಾಗೀತಾ, ರಾಮಗೀತಾ, ಶಿವಗೀತಾ, ಹಂಸಗೀತಾ ಎಂಬುವ ಗೀತೆಗಳಂತಲ್ಲದೆ, ಕೃಷ್ಣಾರ್ಜುನ ಸಂವಾದ ರೂಪವಾಗಿ, ಮೋಹಾಂಧಕಾರದಲ್ಲಿ ಮುಳುಗಿದ್ದ ಅರ್ಜುನನಿಗೆ ಸರ್ವಜ್ಞನಾದ ಶ್ರೀಕೃಷ್ಣನು ಸಮ್ಯಕ್ ಜ್ಞಾನಪ್ರದಾತನಾಗಿ, ಪ್ರಪಂಚಕ್ಕೆ ಆತ್ಮೋದ್ಧಾರಕ್ಕಾಗಿ ಜ್ಞಾನದೀವಿಗೆ

ಯನ್ನು ಹಚ್ಚಿಬಿಟ್ಟಿದ್ದಾನೆ. ಇದೇ ಜಗದ್ಗುರುವಿನಿಂದ ಆದ ಕೆಲಸ. ಈ ಸಾರ್ವಕಾಲಿಕ ಸತ್ಯವನ್ನು ಆಸಕ್ತಿಯುಳ್ಳ ಆಸ್ತಿಕರು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಅಧ್ಯಯನ ಮಾಡಿ ಆಚರಿಸಿ ಪುನೀತರಾಗಬಹುದು.

9. ಈ ಜಗದ್ಗುರುವಿನ ಮಹತ್ವವನ್ನು ವಿವರಿಸಿರುವವರು ಇನ್ಯಾರು ?

ಶರತಲ್ಪದಲ್ಲಿ ಮಲಗಿದ್ದ ಭೀಷ್ಮಾಚಾರ್ಯರನ್ನು, ಯಮಧರ್ಮರಾಜನ ಮಗನಾದ ಧರ್ಮರಾಯನು "ಸ್ತುವಂತಃ ಕಂ, ಕಮರ್ಚಂತಃ ಪ್ರಾಪ್ನುಯುರ್ಮಾನವಾಶ್ಶುಭಂ ।" ಎಂದು ಮಾನವಕುಲದ ಶುಭಾಕಾಂಕ್ಷಿ ಯಾಗಿ ಕೇಳಿದ ಪ್ರಶ್ನೆಗೆ, ತನ್ನ ಎದುರಿಗಿದ್ದ ಶ್ರೀಕೃಷ್ಣನನ್ನು ತೋರಿಸಿ, ಅವನೇ ಮಹಾವಿಷ್ಣು ಎಂದು ಹೇಳಿ ಅವನನ್ನು 'ವಿಶ್ವಂ ವಿಷ್ಣುಃ' ಎಂದು ಆರಂಭಿಸಿ,

"ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ।
ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥

ಎಂದು ಸಾವಿರ ವಿಧವಾಗಿ ಭಗವಂತನನ್ನು ಹೊಗಳಿ, ಆ ಜಗದ್ಗುರುವಿನ ಮಹತ್ವವನ್ನು ಮಹಾಭಾರತದಲ್ಲಿ ಅಂತರ್ಗತವಾದ ವಿಷ್ಣುಸಹಸ್ರನಾಮ ರೂಪವಾಗಿ ಹೇಳಿ ಗೌರವಿಸಿದ್ದಾರೆ.

ಚತುರ್ಮುಖ ಬ್ರಹ್ಮನೂ ಕೂಡ ಕೊನೆಯಲ್ಲಿ ಹೀಗೆ ಸ್ಪಷ್ಟ ಪಡಿಸಿದ್ದಾನೆ :

" ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿ ಶಿರೋರು ಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟೀಯುಗಧಾರಿಣೇ ನಮಃ ॥

ಎಂದು ಪುರುಷಸೂಕ್ತದಲ್ಲಿ ಹೇಳಿರುವ ಆ ವಿರಾಟ್ ಸ್ವರೂಪನೇ ಭೀಷ್ಮರು ಸ್ತುತಿಸಿರುವ ಶ್ರೀಕೃಷ್ಣನೆಂದು ಸಮರ್ಥಿಸಿ, ಗೀತಾಚಾರ್ಯನ ಮಹತ್ವ ವನ್ನು ತಿಳಿಸಿಕೊಟ್ಟಿದ್ದಾನೆ. ಹೀಗೆ ಶ್ರೀಕೃಷ್ಣನೇ ಜಗತ್ತಿಗೆಲ್ಲಾ ಏಕೈಕ ಗುರುವಾಗಿದ್ದಾನೆ.

10. ಹುಟ್ಟುಸಾವುಗಳಿಂದ ಬಿಡುಗಡೆಗೆ ದಾರಿ ಇಲ್ಲವೆ ?

ಹುಟ್ಟು, ಸಾವು ಎಂಬುದು ಆತ್ಮನಿಗೆ ಇಲ್ಲ. ಆದರೆ ಕರ್ಮಾಂತರ ದಿಂದ ಆತ್ಮನಿಗೆ ಪ್ರಾಪ್ತವಾಗಿರುವ ದೇಹಕ್ಕೆ ಅದು ಉಂಟು. ಜನನ, ಬಾಲ್ಯ, ಕೌಮಾರ್ಯ, ಯೌವನ, ಮುಪ್ಪು, ವ್ಯಾಧಿ, ಮರಣ–ಇವೆಲ್ಲಾ ಈ ದೇಹಕ್ಕೆ ಅಂಟಿಬಂದುವು. "ಪುನರಪಿ ಜನನಂ ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ" ಎಂಬಂತೆ ಮರಣದ ನಂತರ ಜನನ, ಜನನದ ನಂತರ ಮರಣ ಎಂಬ ಸಂಸಾರದ ವಿಷವೃತ್ತಕ್ಕೆ ಸೇರಿದವರು ಜೀವಿಗಳು.

ಈ ಜನನ–ಮರಣದ ಚಕ್ರದಿಂದ ವಿಮುಕ್ತಿ ಹೊಂದಲು ದಾರಿಯುಂಟು. ಅದೇ ಅಧ್ಯಾತ್ಮ ಮಾರ್ಗ. ಸದ್ಗುರುವಿನ ಉಪದೇಶದಿಂದ ಶ್ರೀಹರಿಯನ್ನು ತಿಳಿದು ಅವನಲ್ಲಿ ಆತ್ಮ ಸಮರ್ಪಣೆ ಮಾಡಿದರೆ,

" ಉಪದೇಶಾತ್ ಹರಿಂ ಬುಧ್ವಾ ವಿರಮೇತ್ ಸರ್ವಕರ್ಮಸು"

ಎಂಬಂತೆ ಈ ವಿಷಚಕ್ರದಿಂದ ಪಾರಾಗಬಹುದು.

ಪ್ರಾಪಂಚಿಕ ವಿಷಯಗಳು ಅಸ್ಥಿರ, ಚಂಚಲ, ನಶ್ವರ. ತತ್ಕಾಲ ಸುಖವೆಂದು ಭಾವಿಸಿದರೂ, ದುಃಖದಲ್ಲಿ ಪರ್ಯವಸಾನ ಹೊಂದುವಂಥದು ಎಂಬ ಸತ್ಯ ಜ್ಞಾನವನ್ನು ಹೊಂದಿ, ಅವುಗಳಿಗೆ ಹಾತೊರೆಯದೆ, ಭಗವತ್ಕೈಂಕರ್ಯದಲ್ಲಿ ತೊಡಗುವುದು, ಮಾಡಿದುದನ್ನೆಲ್ಲಾ ಸಾತ್ವಿಕ ತ್ಯಾಗಪೂರ್ವಕವಾಗಿ ಹರಿಸಮರ್ಪಣೆ ಮಾಡುವುದು, ಹುಟ್ಟು ಸಾವಿನ ಚಕ್ರದಿಂದ ಬಿಡಿಸಿಕೊಳ್ಳಲು ಇರುವ ಶ್ರೇಷ್ಠವಾದ ಮಾರ್ಗ.

ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮ ಬಂಧ ವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಮ್ ॥
(ಗೀತಾ 2–51)

ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥
(ಗೀತಾ 8–15)

ಹೀಗೆಲ್ಲಾ ಗೀತಾಚಾರ್ಯನು ಜನ್ಮಮೃತ್ಯು ವಿಮುಕ್ತಿಗೆ ಆಶ್ವಾಸನೆಯನ್ನು ಕೊಟ್ಟಿದ್ದಾನೆ.

ಜನ್ಮಮೃತ್ಯುಜರಾವ್ಯಾಧಿ ಚಕ್ರದಿಂದ ಬಿಡುಗಡೆ ಹೊಂದುವುದೇ ಮುಕ್ತಿ. ಈ ಮುಕ್ತಿಯನ್ನು ಅನುಭವಿಸುವುದು ಪರಮಪದದಲ್ಲಿ ಶ್ರೀ ವಿಷ್ಣುವಿನ ಪದಕಮಲದಲ್ಲಿ. ವೈಕುಂಠವೆಂಬ ವಿಷ್ಣುಲೋಕದಲ್ಲಿ ಮುಕ್ತಿ ಹೊಂದಿದ ಮೇಲೆ ಸಂಸಾರಚಕ್ರಕ್ಕೆ ಮರಳಿ ಬರುವುದಿಲ್ಲ, ಪುನರಾವರ್ತಿಯಿಲ್ಲ.

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥

(ಗೀತಾ 8–16)

ಭಗವಂತನಲ್ಲಿ ನಮ್ಮನ್ನು ನಾವು ಸಮರ್ಪಿಸಿಕೊಂಡಮೇಲೆ ಮುಕ್ತಿಯು ನಿಸ್ಸಂಶಯ.

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥

(ಗೀತಾ 12–8)

ಹೀಗೆ ಆಶ್ರಯಿಸಿದವನನ್ನು ಭಗವಂತನು ತಾನೇ ಅವರ ಇಹಲೋಕದ ಯೋಗಕ್ಷೇಮವನ್ನೂ, ಪರಲೋಕದ ಪ್ರಾಪ್ತಿಯನ್ನೂ ನೋಡಿಕೊಳ್ಳುತ್ತಾನೆ.

ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್ ।
ಭವಾಮಿ ನ ಚಿರತ್ಪಾರ್ಥ ಮಯ್ಯಾವೇಶಿತ ಚೇತಸಾಮ್ ॥

(ಗೀತಾ 12–7)

ಅನನ್ಯಾಶ್ಚಿಂತಯಂತೋ ಮಾಮ್ ಯೇ ಜನಾಃ
ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಮ್ ಯೋಗಕ್ಷೇಮಂ
ವಹಾಮ್ಯಹಮ್ ॥
(ಗೀತಾ 9–22)

ಇಲ್ಲಿ ಯೋಗ ಎಂದರೆ ವೈಕುಂಠಪ್ರಾಪ್ತಿ, ಕ್ಷೇಮ ಎಂದರೆ ಪುನರ್ಜನ್ಮವಿಲ್ಲದಿರುವಿಕೆ ಎಂಬೀ ನಿಸ್ಸಂಶಯವಾದ ಮಾತುಗಳಲ್ಲಿ ಭಗವಂತನ ವಾಣಿ, ಈ ಪ್ರಪಂಚದಲ್ಲಿ ಭೋರ್ಗರೆಯುವಂತೆ ಪ್ರಕಾಶಿಸುತ್ತಲಿರುವ ಈ ಗೀತೆಗೂ, ಶ್ರೀ ಗೀತಾಚಾರ್ಯನಿಗೂ ಆಸ್ತಿಕರು ಕೃತಜ್ಞತೆಯಿಂದ ತಲೆಬಾಗಿದ್ದಾರೆ, ಶ್ರೇಯಸ್ಸನ್ನು ಹೊಂದಿದ್ದಾರೆ, ವಿಶ್ವಕಲ್ಯಾಣಮಾರ್ಗವನ್ನು ತೋರಿಸಿ ಕೊಟ್ಟಿದ್ದಾರೆ.



ವಿಶ್ವಕಲ್ಯಾಣಮಾರ್ಗ ಪ್ರವರ್ತಕರು

ವೇದವೇದಾಂತಗಳಲ್ಲೂ ಸ್ಮೃತಿಪುರಾಣೇತಿಹಾಸಗಳಲ್ಲೂ ಉದ್ಘೋಷಿತವಾಗಿರುವ ವಿಶ್ವಕಲ್ಯಾಣ ಮಾರ್ಗವನ್ನು ನಮ್ಮ ಹಿಂದಿನ ಆಚಾರ್ಯವರ್ಗದವರು ಅಲ್ಲಲ್ಲೇ ಸೂಚಿಸಿದ್ದಾರೆ. ಆ ಮಾರ್ಗವನ್ನು ಸರಳವಾಗಿ, ಸುಲಭವಾಗಿ, ಸಂಕ್ಷೇಪವಾಗಿ, ಆಸ್ತಿಕರ ಮನಸ್ಸನ್ನು ಪರಿಪಕ್ವಮಾಡುವ ರೀತಿಯಲ್ಲಿ, ನಿರೂಪಣೆ ಮಾಡಿರುವ ಪ್ರಮುಖ ಆಚಾರ್ಯರೆಂದರೆ ಶ್ರೀ ಯಾಮುನಾಚಾರ್ಯರು. ಇವರ ಕೇವಲ 32 ಶ್ಲೋಕಗಳಲ್ಲಿ ಗೀತಾರ್ಥವನ್ನು ಸಂಗ್ರಹಿಸಿ, ಸುಮಾರು 65 ಶ್ಲೋಕಗಳಲ್ಲಿ ಆ ತತ್ತ್ವಾರ್ಥಸಾಧನೆಯ ಮಾರ್ಗವನ್ನು ತಮ್ಮ ಸ್ತೋತ್ರರತ್ನದಲ್ಲಿ ಪ್ರಸ್ಫುಟಗೊಳಿಸಿ, ವೇದಮಾರ್ಗ-ಪ್ರತಿಷ್ಠಾಪನಾಚಾರ್ಯರಾಗಿ, ಆ ಮಾರ್ಗವು ಆಸೇತು ಹಿಮಾಚಲಪರ್ಯಂತ ಹಬ್ಬುವಂತೆ ಮಾಡಲು ಶ್ರೀರಾಮಾನುಜಾಚಾರ್ಯರಿಗೆ ಪ್ರೇರಕರೂ, ಸ್ಫೂರ್ತಿದಾಯಕರೂ ಆದರು. ಇವರ ಚರಿತ್ರೆಯನ್ನು ಸಂಗ್ರಹವಾಗಿ ತಿಳಿದು, ಇವರ ಈ ಎರಡು ಕೃತಿಗಳ ಪ್ರಯೋಜನವನ್ನು ತಿಳಿಯೋಣ.

ಶ್ರೀಯಾಮುನ ಅಥವಾ ಆಳವಂದಾರ್ ಪರಿಚಯ

ಇವರ ಕಾಲ ಕ್ರಿ.ಶ. 912 ರಿಂದ 1042. ಚಿದಂಬರದಿಂದ 10 ಮೈಲಿ ದೂರದಲ್ಲಿರುವ ಕಾಟ್ಟುಮನ್ನಾರ್ ಕೋಯಿಲ್ ಅಥವಾ ವೀರನಾರಾಯಣಪುರವೆಂಬ ದಿವ್ಯಕ್ಷೇತ್ರದಲ್ಲಿ ನಾಥಮುನಿ ಎಂಬ ಪ್ರಸಿದ್ಧರಾದ ಯೋಗಿಗಳು ಇದ್ದರು. ಇವರು ತಮ್ಮ ಯೋಗಬಲದಿಂದ ವಕುಳಭೂಷಣ

ಅಥವಾ ನಮ್ಮಾಳ್ವಾರರನ್ನು ಪ್ರತ್ಯಕ್ಷಮಾಡಿಕೊಂಡು, ಮಂತ್ರಗಳ ಉಪದೇಶ ಹೊಂದಿ, ನಾಲ್ಕು ಸಾವಿರ ದಿವ್ಯ ಪ್ರಬಂಧಗಳನ್ನು ಸಂಪಾದಿಸಿ, ಆಸ್ತಿಕ ಜನ ಸಮೂಹಕ್ಕೆ ಮಹೋಪಕಾರ ಮಾಡಿದ್ದಾರೆ. ಇವರು ಅಚಿಂತ್ಯಾದ್ಭುತ ಜ್ಞಾನವೈರಾಗ್ಯರಾಶಿಯಾಗಿದ್ದರು. ಇವರ ಮಕ್ಕಳಾದ ಈಶ್ವರ ಮುನಿಗಳು ಉತ್ತರ ಭಾರತದ ಮಥುರಾ ಪಟ್ಟಣಕ್ಕೆ ಹೋಗಿ, ಯಮುನಾ ನದಿಯ ತೀರ ಲೀಲಾ ವೈಭವದಿಂದ ವಿರಾಜಮಾನನಾದ ಶ್ರೀಕೃಷ್ಣಭಗವಾನನ ದರ್ಶನಮಾಡಿ ಪುತ್ರಸಂತಾನ ಪಡೆದರು. ಆ ಸುಪುತ್ರನಿಗೆ ಯಾಮುನ ಎಂದು ಹೆಸರಿಟ್ಟರು.

ಯಾಮುನಾಚಾರ್ಯರು ಭಕ್ತಿಜ್ಞಾನಸಾಮ್ರಾಜ್ಯದಲ್ಲಿ ತುಂಬಾ ಮುಂದುವರೆದವರು. ಆ ಕಾಲಕ್ಕೆ ಮಹಾ ವಿದ್ವಾಂಸರಾದ ಅಕ್ಕಿ ಆಳ್ವಾನ್ ಎಂಬುವರನ್ನು ವಾದದಲ್ಲಿ ಪರಾಭವಗೊಳಿಸಿ "ಆಳವಂದಾರ್" ಎಂಬ ಬಿರುದನ್ನು ಪಡೆದರು. ನಾಥಮುನಿಗಳ ಶಿಷ್ಯರಾದ ರಾಮಮಿಶ್ರರು ಅಥವಾ ಮಣಕ್ಕಾಲ್ ನಂಬಿ ಮತ್ತು ಪುಂಡರೀಕಾಕ್ಷರು ಅಥವಾ ಉಯ್ಯಕ್ಕೊಂಡಾರ್ ಇವರಿಬ್ಬರ ಪ್ರಯತ್ನದಿಂದ ಯಾಮುನರು ಸಕಲವಿದ್ಯಾಪಾರಂಗತರಾಗಿ ಶ್ರೀರಂಗದಲ್ಲಿ ಶ್ರೀ ರಂಗನಾಥಸ್ವಾಮಿಯ ಸಾಕ್ಷಾತ್ಕಾರ ಹೊಂದಿ, ವಿಶ್ವ ಸನ್ಮಾರ್ಗ ಪರಂಪರೆಯನ್ನು ಬೆಳೆಸಲು ಬದ್ಧಕಂಕಣರಾದರು. ಇವರ ಗ್ರಂಥಗಳಿಂದ ಸ್ಫೂರ್ತಿ ಹೊಂದಿದವರಾಗಿ, ಜ್ಞಾನ ವೈರಾಗ್ಯ ಹೊಂದಿದ್ದ ಶ್ರೀರಾಮಾನುಜಾಚಾರ್ಯರು, ಆಸೇತುಹಿಮಾಚಲ ಶ್ರೀವೈಷ್ಣವ ಸಂಪ್ರದಾಯ (ವಿಶ್ವಕಲ್ಯಾಣಮಾರ್ಗ ಪರಂಪರೆ)ವನ್ನು ಪ್ರಸಾರ ಮಾಡಿದರು.

ಶ್ರೀ ಯಾ ಮು ನ ರು ರಚಿಸಿದ ಗ್ರಂಥಗಳು :-(1) ಗೀತಾರ್ಥ ಸಂಗ್ರಹ, (2) ಚತುಶ್ಶ್ಲೋಕೀ, (3) ಸ್ತೋತ್ರರತ್ನ, (4) ಆಗಮ ಪ್ರಾಮಾಣ್ಯ, (5) ಸಿದ್ಧಿತ್ರಯ, (6) ಮಹಾಪುರುಷ ನಿರ್ಣಯ, (7) ಕಾಶ್ಮೀರಾಗಮ ಸಂಪ್ರದಾಯ. ಯಾಮುನರನ್ನು ಹಾಡಿ ಹೊ ಗ ಳಿ ದ ಈ ಶ್ಲೋಕಗಳು ನಿತ್ಯಾನುಸಂಧಾನಕ್ಕೆ ಯೋಗ್ಯವಾದುವು.

ಯತ್ಪದಾಂಭೋರುಹಧ್ಯಾನ ವಿಧ್ವಸ್ತಾಶೇಷಕಲ್ಮಷಃ ।
ವಸ್ತುತಾಮುಪಯಾತೋಽಹಂ ಯಾಮುನೇಯಂ
ನಮಾಮಿ ತಂ ॥

ಯಾಮುನಾರ್ಯ ಸುಧಾಂಭೋಧಿಂ ಅವಗಾಹ್ಯ ಯಥಾಮತಿ ।
ಆದಾಯ ಭಕ್ತಿ ಯೋಗಾಖ್ಯಂ ರತ್ನಂ ಸಂದರ್ಶಯಾಮ್ಯಹಂ ॥

ವಿಗಾಹೇ ಯಾಮುನಂ ತೀರ್ಥಂ ಸಾಧುಬೃಂದಾವನೇ ಸ್ಥಿತಂ ।
ನಿರಸ್ತ ಜಿಹ್ಮಗ ಸ್ಪರ್ಶೇ ಯತ್ರ ಕೃಷ್ಣಃ ಕೃತಾದರಃ ॥

ವಿಧಾಯ ವೈದಿಕಂ ಮಾರ್ಗಂ ಆಕೌತಸ್ಕುತ ಕಂಟಕಂ ।
ನೇತಾರಂ ಭಗವದ್ಭಕ್ತೇಃ ಯಾಮುನಂ ಮನವಾಮಹೈ ॥

ಮೇಲೆ ಹೇಳಿದ ಯಾಮುನರ 7 ಗ್ರಂಥಗಳಲ್ಲಿ ಲೋಕಪ್ರಸಿದ್ಧವಾಗಿ, ಆನಂದಸಾಗರದಲ್ಲಿ ಪ್ರವಚನಕಾರರನ್ನೂ, ಶ್ರೋತೃವರ್ಗವನ್ನೂ ಮುಳು ಗಿಸತಕ್ಕ ಗ್ರಂಥಗಳೆಂದರೆ ಸ್ತೋತ್ರರತ್ನ ಮತ್ತು ಗೀ ತಾ ರ್ಥ ಸಂಗ್ರಹ.

ವಿಶ್ವಕಲ್ಯಾಣ ಮಾರ್ಗವನ್ನು ಸಂಕ್ಷೇಪವಾಗಿ ಹಿಂದೆ ಪರಿಚಯಿಸುವಾಗ ಗೀತೆಯ ಗೀತಾಚಾರ್ಯನ ಪ್ರಭಾವವನ್ನು ಕಂಡೆವಷ್ಟೆ. ಅದನ್ನೇ ಇನ್ನಷ್ಟು ವಿವರವಾಗಿ ಕಾಣಿಸುತ್ತೇವೆ. ಈ ಎರಡು ಮಹಾನ್ ಕೃತಿಗಳಲ್ಲಿ ಮೊದಲು ಗೀತಾರ್ಥ ಸಂಗ್ರಹದ ಪರಿಚಯುವನ್ನು ಹೊಂದೋಣ.

ಶುಭಮಸ್ತು

ಪ್ರಚೋದನೆಗೆ ಕಾರಣ

ದೊಡ್ಡವರು ಇರುವಾಗ ನಮಗೆ ಬರೆಯುುವ ಕೆಲಸ ಸಾಧ್ಯವಿಲ್ಲವೆಂದು ಇದ್ದರೂ ಸಹ ಶ್ರೀರಂಗನಾಥನು ಆಂಡಾಳ್ ದೇವಿಯಿಂದ ಹೂವನ್ನು ಕೇಳಿ ಪಡೆದಂತೆ, ಎಲ್ಲೋ ಇದ್ದ ಅಹೋಬಲಸ್ವಾಮಿಗಳನ್ನು ಬಲವಂತವಾಗಿ ತನ್ನ ಗೋಪುರವನ್ನು ಪೂರ್ತಿ ಮಾಡುವಂತೆ ಆಜ್ಞಾಪಿಸಿ, ಅದನ್ನು ನಂಬಿದವರಿಂದಲೂ ನಂಬದೆ ಇರುವವರಿಂದಲೂ ಸಹ ಅವನು ಈಗಲೂ ಮಾತಾಡುತ್ತಾನೆ. ಅವನು ರಂಗರಾಜನಾದರೂ, ಸಾರ್ವಭೌಮನಾದರೂ, ಗೋಪಿಯರೊಂದಿಗೆ ಕೃಷ್ಣನು ಬೆರೆತ ಹಾಗೆ, ನಮ್ಮಗಳ ಜೊತೆಯಲ್ಲಿ ಪಳಗಿದ ರೀತಿಯಲ್ಲಿ ಪಾಂಡವರನ್ನು ಕಾಪಾಡಿದುದಕ್ಕಿಂತಲೂ ಚೆನ್ನಾಗಿ, ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ತಾನು ಮಲಗಿದ ಹಾಗಿದ್ದರೂ ಸಹ ದಾಸನನ್ನು ಶ್ರೀರಂಗಕ್ಕೆ ಕರೆಸಿಕೊಂಡು ಅಹೋಬಲ ಸ್ವಾಮಿಗಳಿಂದ ಕಾಲಕ್ಷೇಪವನ್ನು, ಗೋಪುರವನ್ನು ಕಟ್ಟುತ್ತಿದ್ದ ಹಾಗೆಯೇ ಹೇಳಿಸಿ, ದೇವತೆಗಳೂ ಸಹ ಆಶ್ಚರ್ಯ ಪಡುವ ರೀತಿಯಲ್ಲಿ ವಾನರರ ಸಹಾಯದಿಂದ

*

ಕಟ್ಟಿದ ರಾಮ ಸೇತುವೆಯಂತೆ, ಅಹೋಬಲ ಸ್ವಾಮಿಗಳಿಂದ ಇಂತಹ ಒಳ್ಳೆ
ಕೆಲಸ ಮಾಡಲು ಹೊರಟವರು ಪರಾಭವಗೊಳ್ಳುವುದು ಸಾಧ್ಯವಿಲ್ಲ
ಎಂಬುದನ್ನು, ಸಾವಿರಾರು ವರ್ಷಗಳ ಕಾಲ ತಿರುಮಂಗೈ ಆಳ್ವಾರ್ ಕಟ್ಟಿದ
ಕೋಟೆ ಹಾಗೆ, ಸ್ವಾಮಿಗಳು ಮಾಡಿರುವ ಗೋಪುರವನ್ನು ಬಸ್ಸಿನಲ್ಲಿ
ಹೋಗುವವರೂ, ರೈಲಿನಲ್ಲಿ ಹೋಗುವವರೂ, ವಿಮಾನದಲ್ಲಿ ಹೋಗುವವರೂ
ನಿರೀಕ್ಷಿಸಿ ವೈಕುಂಠದ ಸ್ಮರಣೆಮಾಡಿಕೊಂಡು, ಅವರಿಗೆ ಅರಿಯದಂತೆ ಅಂಜಲಿ
ಸಮರ್ಪಿಸುವ ಹಾಗೆ ಮಾಡಿಸಿ ಸರ್ವರಿಗೂ ಮುಕ್ತಿಗೆ ದಾರಿ ಮಾಡಿರುತ್ತಾನೆ.
ಅಹೋಬಲ ಸ್ವಾಮಿಗಳು ತಮ್ಮಿಂದ ಕೇಳಿದ ಸಂಪ್ರದಾಯ ವಿಷಯವನ್ನು
ವಿಶ್ವಕ್ಕೆ ಯಾವ ರೂಪದಲ್ಲಾದರೂ ತೋರಿಸಿಯೇ ತೀರಬೇಕೆಂದು ಅನುಗ್ರಹಿ
ಸಿದುದರಿಂದ, ಯಾರಿಂದಲೂ ಅಳಿಸಲಸಾಧ್ಯವಾದ ಗೋಪುರವನ್ನು ಕಟ್ಟಲು
ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ಕಡೇಪಕ್ಷ ಮೋಕ್ಷಕ್ಕೆ ಸಾಧನವಾದ
ಎಲ್ಲವನ್ನು ಕೇಳಿಸಿಕೊಳ್ಳದೇ ತಾನಾಗಿಯೇ ಅನುಗ್ರಹಿಸುವ ಆಳ್ವಾರುಗಳ
ಪಾಶುರಗಳನ್ನು, ಗೀತಾರ್ಥ ಸಂಗ್ರಹ, ಸ್ತೋತ್ರರತ್ನ, ಒಂದೊದಾಗಿ ಬಿಡುಗಡೆ
ಮಾಡಿ ಪೂರ್ವಾಚಾರ್ಯರನ್ನು ಸಂತೋಷಪಡಿಸುವ ಕಾರ್ಯಕ್ಕೆ ಕೈ
ಹಾಕಿದ್ದೇನೆ. ಈ ಕಾರ್ಯಕ್ಕೆ ಯಾವಾಗಲೂ ಎಲ್ಲಾ ದೇಶದಲ್ಲೂ, ಎಲ್ಲಾ
ಅವಸ್ಥೆಯಲ್ಲೂ ನಮ್ಮನ್ನು ಅನುಗ್ರಹಿಸುತ್ತಿರುವ ಲಕ್ಷ್ಮೀನೃಸಿಂಹ ಸ್ವಾಮಿ
ಯನ್ನು ಈಗಿರುವ ಶ್ರೀರಂಗಂ ರಾಜಗೋಪುರವನ್ನು ದ್ರವ್ಯದಿಂದಾಗಲಿ
ಮನುಷ್ಯ ಸಹಾಯದಿಂದಾಗಲಿ, ಒಂದು ದಿವಸವೂ ನಿಲ್ಲದಂತೆ, 6 ವರ್ಷ
ಗಳಲ್ಲಿ ಕಟ್ಟಿ ಮುಗಿಸಿರುವ 44ನೇ ಪಟ್ಟದ ಅಹೋಬಲ ಸ್ವಾಮಿಗಳಾದ
ಶ್ರೀವೇದಾಂತದೇಶಿಕ ಯತೀಂದ್ರ ಮಹಾದೇಶಿಕರ್‌ರವರ ಪಾದಾರವಿಂ

ಗಳಲ್ಲಿ ಎಲ್ಲಾ ಭಾರವನ್ನು ಒಪ್ಪಿಸಿ ಈ ಪುಸ್ತಕದಿಂದ ಪ್ರಚಾರ ಕಾರ್ಯದ ಒಂದು ಭಾಗವನ್ನು ಆರಂಭಿಸಿದ್ದೇನೆ.

ಲಕ್ಷ್ಮೀನೃಸಿಂಹ ಪರಬ್ರಹ್ಮಣೇ ನಮಃ ।
ಅಸ್ಮದ್ಗುರುಭ್ಯೋ ನಮಃ
ಅಸ್ಮತ್ ಪರಮ ಗುರುಭ್ಯೋ ನಮಃ ।
ಅಸ್ಮತ್ ಸರ್ವ ಗುರುಭ್ಯೋ ನಮಃ

1. ಗೀತಾರ್ಥ ಸಂಗ್ರಹ

ಏಕಾಂತಾತ್ಯಂತ ದಾಸ್ಯೈಕರತಿಸ್ತತ್ಪದಮಾಪ್ನುಯಾತ್ ।
ತತ್ಪ್ರಧಾನಮಿದಂ ಶಾಸ್ತ್ರಮಿತಿ ಗೀತಾರ್ಥ ಸಂಗ್ರಹಃ ॥

ಎಂಬಂತೆ 700 ಶ್ಲೋಕಗಳ ಸವಿಸ್ತಾರ ಭಗವದ್ಗೀತಾ ಶಾಸ್ತ್ರಾರ್ಥವನ್ನು ಕೇವಲ 32 ಶ್ಲೋಕಗಳಲ್ಲಿ ಸಂಗ್ರಹಿಸಿ, ದಿನವೂ ಅನುಸಂಧಾನ ಮಾಡಲು ಉಪಕಾರಿಯಾಗಿರುವ ಕೃತಿಯಿದು. ಜ್ಞಾನಿಯಾದವನು ಭಗವತ್ಸಂಶ್ಲೇಷ ವನ್ನು ಸುಖವೆಂದೂ ಅವನ ವಿಯೋಗವೇ ದುಃಖವೆಂದೂ ಭಾವಿಸುತ್ತಾನೆ. ಭಗವಂತನ ಅರ್ಚಾವತಾರ ವಿಗ್ರಹವನ್ನು ಪೂಜಿಸುವುದರಿಂದ ಇದು ಲಭ್ಯ ವಾಗುತ್ತದೆ. ಈ ವಿಗ್ರಹ ಪೂಜಾಫಲವು ಅವನನ್ನು ಸದಾ ಧ್ಯಾನಿಸಲು ಉಪಕಾರಿ. ಈ ಧ್ಯಾನವು ಮಾನಸಿಕ ಕಾರ್ಯ. ಮನಸ್ಸಾದರೋ ಚಂಚಲ. ಈ ಚಂಚಲತೆಯಿಂದ ಧ್ಯಾನಭಂಗವಾದಾಗ ಭಯವಿನಯಗಳಿಂದ ಅವನ ನಾಮೋಚ್ಚಾರ ರೂಪದ ವಾಚಿಕ ಕ್ರಿಯೆಯಲ್ಲಿ ತೊಡಗಬಹುದು. ಇದೂ ಬೇಸರದ ಕೆಲಸವೆನಿಸಿದಾಗ ಪರಮಪುರುಷನ ವಿಗ್ರಹದ ಎದುರಿನಲ್ಲಿ ಬಿದ್ದು ಬಿದ್ದು ನಮಸ್ಕಾರ ಮಾಡುವುದು ಶಾರೀರಕ ಕ್ರಿಯೆ. ಹೀಗೆ ಕಾಯಾವಾಚಾ

ಮನಃಪೂರ್ವಕವಾಗಿ ಕೈಂಕರ್ಯ ಮಾಡುವುದು ಉಚಿತ. ಹಾಗೆಯೆ ಸ್ತೋತ್ರಕೀರ್ತನಗಳೂ ಭಗವಂತನನ್ನು ಪ್ರಸಾದಿಸುವ ಮಾರ್ಗಗಳು ಹೀಗೆ ಯಥಾಶಕ್ತಿ ಪರಮಾತ್ಮನಲ್ಲಿ ಆತ್ಮಸಮರ್ಪಣ ಮಾಡುವುದು ಮುಖ್ಯ ನಿತ್ಯಕರ್ಮಗಳಾದ ಸಂಧ್ಯಾವಂದನೆ, ದೇವರ ಪೂಜೆಗಳೂ, ನೈಮಿತ್ತಿ ಕರ್ಮಗಳಾದ ಶ್ರಾದ್ಧತರ್ಪಣಾದಿಗಳೂ ಯಾವ ಫಲಾಪೇಕ್ಷೆಯೂ ಇಲ್ಲದೆ ಭಗವದಾಜ್ಞೆಯೆಂದು ತಿಳಿದು, ಭಗವತ್ಪ್ರೀತ್ಯರ್ಥವಾಗಿ ಮಾಡಬೇಕಾದುವು ಹೀಗೆ ಸಾತ್ವಿಕತ್ಯಾಗಪೂರ್ವಕವಾದ ಕರ್ಮಾನುಷ್ಠಾನ, ಅರ್ಥಾನು ಸಂಧಾನದಿಂದ ಮಾಡುವ ಸ್ತುತಿಗಳು, ಭಗವಂತನಲ್ಲಿ ತಲ್ಲೀನಗೊಳಿಸು ಭಕ್ತಿರೂಪನಾಮಸಂಕೀರ್ತನಾದಿಗಳು, ಆತ್ಮನನ್ನು ಪರಮಾತ್ಮನೆಡೆ ಒಯ್ಯುವ ದಾರಿಗಳು. ನಿರಂತರ ಅನುಷ್ಠಾನವು ಪರಿಪೂರ್ಣ ಬ್ರಹ್ಮಾನ ಭವವನ್ನು ಕೊಡತಕ್ಕುದು.

ಈಗಿನ ಸಮಾಜ ಸನ್ನಿವೇಶವೋ ಈ ರೀತಿಯ ಆಧ್ಯಾತ್ಮ ಕರ್ಮ ಗಳಿಗೆ ಪ್ರೇರಕವಾಗಿಲ್ಲ. ಸರಿಯಾದ ಆಚಾರ್ಯರುಗಳ ಅಭಾವ, ಹಾ ಕೆಲವರಿದ್ದರೆ ಅವರಲ್ಲಿ ಆದರ ಗೌರವವಿಲ್ಲದೆ ಅನಾದರಿಸುವ ಜನ, ಕಲ ಯಲು ಹೆಚ್ಚಾಗಿ ಆಸಕ್ತಿಯಾಗಲೀ, ಕಾಲವಾಗಲೀ ಇಲ್ಲದ ಜನ, ಇದ ಜೊತೆಗೆ ಆಧುನಿಕ ಯಂತ್ರಯುಗದ ಸೌಲಭ್ಯಗಳಿಂದ ಐಹಿಕ ಇಂದ್ರಿಯ ಸುಖಾನುಭವಗಳಕಡೆಗೆ ಸೆಳೆಯಲ್ಪಟ್ಟ ಮನಸ್ಸು—ಹೀಗಿದ್ದು ಆರ್ಷ ಪರಂಪರ ಸಂಪ್ರದಾಯಗಳೂ ನಶಿಸುತ್ತಿವೆ. ಮನುಷ್ಯನಿಗೆ ಆಯುಸ್ಸು, ಆರೋಗ್ಯ ಶರೀರ ದಾರ್ಢ್ಯ ಬಹಳ ಮುಖ್ಯ. ಅವುಗಳಿರುವಾಗಲೇ ಆಧ್ಯಾತ್ಮ ಸಂಪತ್ತನ್ನು

ಸಂಪಾದಿಸಬೇಕು. ಆದರೆ ಆರ್ಥಿಕ ಸಂಪತ್ತನ್ನು ಸಂಪಾದಿಸಲು ಹಾತೊರೆದು ತನ್ನ ಆಸೆಗಳನ್ನು ಹೆಚ್ಚಿಸಿಕೊಂಡು ನಿರಾಶೆ, ಅಸಾಫಲ್ಯತೆಗಳಿಂದ ತನುಮನಧನಗಳನ್ನು ಹೊಂದಿ ವ್ಯಾಧಿಪೀಡೆ, ತಸ್ಕರಬಾಧೆಗಳಿಗೊಳಗಾಗಿ ಜೀವನವನ್ನು ವ್ಯರ್ಥಮಾಡಿಕೊಳ್ಳಲಾಗುತ್ತಿದೆ. ಸರಿಯಾದ, ಸಂತೋಷಕರವಾದ ಜೀವನ ನಡೆಸಲು ಆಧ್ಯಾತ್ಮ ಸಂಸ್ಕಾರವಿದ್ದರೇನೇ ಸಾಧ್ಯ. ಐಹಿಕಾಮುಷ್ಮಿಕಗಳನ್ನು ಸಮಪ್ರಮಾಣದಲ್ಲಿ ಬೆಳೆಸಿ ಜೀವನವನ್ನು ಬೆಳೆಸಿಕೊಳ್ಳಬೇಕು. " ವೈದ್ಯೋ ನಾರಾಯಣೋ ಹರಿಃ " ಎಂಬುದು ಸತ್ಯಸ್ಯ ಸತ್ಯವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಮನಸ್ಸೆಂಬ ಮಂಗವನ್ನು ಪಳಗಿಸಿ ಕಟ್ಟಿಹಾಕಬೇಕು. ಇಂದ್ರಿಯ ಚಾಪಲ್ಯಗಳನ್ನು ತಡೆಹಿಡಿದು ಸಂಯಮಶೀಲರಾಗಿರಬೇಕು. ನೀತಿ ನಿಯಮಗಳ, ಸಮಾಜ ಧರ್ಮಗಳ ಪಾಲನೆ ಬಹು ಮುಖ್ಯ. ಎಲ್ಲವೂ ಹಿಂದಿನ ಶಾಸ್ತ್ರ ದೃಷ್ಟಿಯಿಂದ ಬೆಳೆದುಬಂದಿವೆ. ಭಗವತ್ಪ್ರೀತ್ಯರ್ಥವಾಗಿ, ಜನತಾ ಜನಾರ್ದನನ ಸೇವೆಗಾಗಿ, ಬೆಳೆದು ಬಂದಿರುವ ಸಮಾಜ ಕಟ್ಟಳೆಗಳನ್ನು ಮೀರಬಾರದು. ಕೇವಲ ಸ್ವಾರ್ಥ ಎಷ್ಟು ಹೇಯ ಎಂಬುದನ್ನು ತಿಳಿದು, ನೀಚಕಾರ್ಯಗಳನ್ನು ಮಾಡದೆ, ನಾವು ಉತ್ತಮ ವ್ಯಕ್ತಿಗಳಾಗಬೇಕಾದರೆ, ಗೀತಾ ಪ್ರವಚನಗಳನ್ನು ಕೇಳುವುದು, ಗೀತಾಶ್ಲೋಕಗಳನ್ನು ಪಠಿಸುವುದು ಬಹಳ ಅಗತ್ಯ. ಗೀತೆಯ ಅರ್ಥವನ್ನು 32 ಶ್ಲೋಕಗಳಲ್ಲಿ ಅಡಕಪಡಿಸಿರುವ ಗೀತಾರ್ಥ ಸಂಗ್ರಹವನ್ನು ಪ್ರತಿದಿನ ಪಾರಾಯಣ ಮಾಡುವುದು ಶ್ರೇಯಸ್ಕರ. ಆಧ್ಯಾತ್ಮ ಪುಸ್ತಕಗಳನ್ನು ಕೊಂಡು ಓದುವುದೂ ಹಿತವಾದ ಮಾರ್ಗ.

श्री गीतार्थ संग्रहः

विगाहे यामुनं तीर्थं
साधु बृन्दावने स्थितम् ।
निरस्त जिह्मगस्पर्शे
यत्र कृष्णः कृतादरः ॥

1 स्वधर्म ज्ञान वैराग्य
साध्य भक्त्येक गोचरः ।
नारायणः परं ब्रह्म
गीता शास्त्रे समीरितः ॥ १ ॥

2 ज्ञान कर्मात्मिके निष्ठे
योग लक्ष्ये सुसंस्कृते ।
आत्मानुभूति सिद्ध्यर्थे
पूर्वषट्केन चोदिते ॥ २ ॥

ಶ್ರೀ ಗೀತಾರ್ಥ ಸಂಗ್ರಹ

ವಿಗಾಹೇ ಯಾಮುನಂ ತೀರ್ಥಂ
ಸಾಧು ಬೃಂದಾವನೇ ಸ್ಥಿತಂ ।
ನಿರಸ್ತ ಜಿಹ್ಮಗ ಸ್ಪರ್ಶೇ
ಯತ್ರ ಕೃಷ್ಣಃ ಕೃತಾದರಃ ॥

ಸ್ವಧರ್ಮ ಜ್ಞಾನ ವೈರಾಗ್ಯ
ಸಾಧ್ಯ ಭಕ್ತ್ಯೇಕ ಗೋಚರಃ ।
ನಾರಾಯಣಃ ಪರಂ ಬ್ರಹ್ಮ
ಗೀತಾ ಶಾಸ್ತ್ರೇ ಸಮೀರಿತಃ ॥ 1 ॥

ಜ್ಞಾನ ಕರ್ಮಾತ್ಮಿಕೇ ನಿಷ್ಠೇ
ಯೋಗಲಕ್ಷ್ಯೇ ಸುಸಂಸ್ಕೃತೇ ।
ಆತ್ಮಾನುಭೂತಿ ಸಿದ್ಧ್ಯರ್ಥೇ
ಪೂರ್ವಷಟ್ಕೇನ ಚೋದಿತೇ ॥ 2 ॥

3 मध्यमे भगवत्तत्त्व
याथात्म्यावाप्ति सिद्धये ।
ज्ञान कर्माभिनिर्वर्त्त्यो
भक्तियोगः प्रकीर्तितः ॥ ३ ॥

4 प्रधान पुरुषव्यक्त
सर्वेश्वर विवेचनम् ।
कर्म धीर्भक्तिरित्यादि
पूर्वशेषोऽन्तिमोदितः ॥ ४ ॥

5 अस्थान स्नेह कारुण्य
धर्माऽधर्म धियाऽऽकुलम् ।
पार्थं प्रपन्नमुद्दिश्य
शास्त्रावतरणं कृतम् ॥ ५ ॥

ಮಧ್ಯಮೇ ಭಗವತ್ತತ್ತ್ವ
ಯಾಥಾತ್ಮ್ಯಾವಾಪ್ತಿ ಸಿದ್ಧಯೇ ।
ಜ್ಞಾನ ಕರ್ಮಾಭಿ ನಿರ್ವರ್ತ್ಯೋ
ಭಕ್ತಿ ಯೋಗಃ ಪ್ರಕೀರ್ತಿತಃ ॥ 3 ॥

ಪ್ರಧಾನ ಪುರುಷ ವ್ಯಕ್ತ
ಸರ್ವೇಶ್ವರ ವಿವೇಚನಂ ।
ಕರ್ಮಧೀರ್ಭಕ್ತಿರಿತ್ಯಾದಿ
ಪೂರ್ವಶೇಷೋಽನ್ತಿಮೋದಿತಃ ॥ 4 ॥

ಅಸ್ಥಾನ ಸ್ನೇಹ ಕಾರುಣ್ಯ
ಧರ್ಮಾಧರ್ಮ ಧಿಯಾಽಽಕುಲಂ ।
ಪಾರ್ಥಂ ಪ್ರಪನ್ನಮುದ್ದಿಶ್ಯ
ಶಾಸ್ತ್ರಾವತರಣಂ ಕೃತಮ್ ॥ 5 ॥

6 नित्यात्मासङ्ग कर्मेहा
गोचरा सांख्ययोगधीः ।
द्वितीये स्थितधीलक्ष्या
प्रोक्ता तन्मोह शान्तये ॥ ६ ॥

7 असक्त्या लोकरक्षायै
गुणेष्वारोप्य कर्तृतां ।
सर्वेश्वरे वा न्यस्योक्ता
तृतीये कर्मकार्यता ॥ ७ ॥

8 प्रसङ्गात्स्व स्वभावोक्तिः
कर्मणोऽकर्मताऽस्य च ।
भेदाज्ञानस्य माहात्म्यं
चतुर्थाध्याय उच्यते ॥ ८ ॥

ನಿತ್ಯಾತ್ಮಾಸಂಗ ಕರ್ಮೇಹಾ
ಗೋಚರಾ ಸಾಂಖ್ಯಯೋಗ ಧೀಃ ।
ದ್ವಿತೀಯೇ ಸ್ಥಿತ ಧೀ ಲಕ್ಷಣಾ
ಪ್ರೋಕ್ತಾ ತನ್ಮೋಹ ಶಾಂತಯೇ ॥ 6 ॥

ಅಸಕ್ತ್ಯಾ ಲೋಕ ರಕ್ಷಾಯೈ
ಗುಣೇಷ್ವಾರೋಪ್ಯ ಕರ್ತೃತಾಂ ।
ಸರ್ವೇಶ್ವರೇ ವಾ ನ್ಯಸ್ಯೋಕ್ತಾ
ತೃತೀಯೇ ಕರ್ಮ ಕಾರ್ಯತಾ ॥ 7 ॥

ಪ್ರಸಂಗಾತ್ಸ್ವಸ್ವಭಾವೋಕ್ತಿಃ
ಕರ್ಮಣೋಽಕರ್ಮತಾಽಸ್ಯ ಚ ।
ಭೇದಾಜ್ಞಾನಸ್ಯ ಮಾಹಾತ್ಮ್ಯಂ
ಚತುರ್ಥಾಧ್ಯಾಯ ಉಚ್ಯತೇ ॥ 8 ॥

9 कर्मयोगस्य सौकर्यं
शैघ्र्यं काश्चन तद्विधाः ।
ब्रह्मज्ञानप्रकारश्च
पञ्चमाध्याय उच्यते ॥ ९ ॥

10 योगाभ्यास विधिर्योगी
चतुर्धा योगसाधनम् ।
योगसिद्धः स्वयोगस्य
पारम्यं षष्ठ उच्यते ॥ १० ॥

11 स्वयाथात्म्यं प्रकृत्याऽस्य
तिरोधिश्शरणागतिः ।
भक्तभेदः प्रबुद्धस्य
श्रैष्ठ्यं सप्तम उच्यते ॥ ११ ॥

ಕರ್ಮಯೋಗಸ್ಯ ಸೌಕರ್ಯಂ
ಶೈಘ್ರ್ಯಂ ಕಾಶ್ಚನ ತದ್ವಿಧಾಃ ।
ಬ್ರಹ್ಮಜ್ಞಾನ ಪ್ರಕಾರಶ್ಚ
ಪಂಚಮಾಧ್ಯಾಯ ಉಚ್ಯತೇ ॥ 9 ॥

ಯೋಗಾಭ್ಯಾಸ ವಿಧಿರ್ಯೋಗೀ
ಚತುರ್ಧಾ ಯೋಗಸಾಧನಂ ।
ಯೋಗಸಿದ್ಧಃ ಸ್ವಯೋಗಸ್ಯ
ಪಾರಮ್ಯಂ ಷಷ್ಠ ಉಚ್ಯತೇ ॥ 10 ॥

ಸ್ವಯಾಥಾತ್ಮ್ಯಂ ಪ್ರಕೃತ್ಯಾಽಸ್ಯ
ತಿರೋಧಿಃ ಶರಣಾಗತಿಃ ।
ಭಕ್ತಭೇದಃ ಪ್ರಬುದ್ಧಸ್ಯ
ಶ್ರೈಷ್ಠ್ಯಂ ಸಪ್ತಮ ಉಚ್ಯತೇ ॥ 11 ॥

12 ऐश्वर्याक्षर याथात्म्यं
भगवच्चरणार्थिनाम् ।
वेद्योपादेय भावानां
अष्टमे भेद उच्यते ॥ १२ ॥

13 स्वमाहात्म्यं मनुष्यत्वे
परत्वं च महात्मनां ।
विशेषो नवमे योगः
भक्तिरूपः प्रकीर्तितः ॥ १३ ॥

14 स्वकल्याण गुणानंत्य
कृत्स्न स्वाधीनता मतिः ।
भक्त्युत्पत्ति विवृद्ध्यर्था
विस्तीर्णा दशमोदिता ॥ १४ ॥

ಐಶ್ವರ್ಯಾಕ್ಷರ ಯಾಥಾತ್ಮ್ಯಂ
ಭಗವಚ್ಛರಣಾರ್ಥಿನಾಮ್ ।
ವೇದ್ಯೋಪಾದೇಯ ಭಾವಾನಾಂ
ಅಷ್ಟಮೋ ಭೇದ ಉಚ್ಯತೇ ॥ 12 ॥

ಸ್ವಮಾಹಾತ್ಮ್ಯಂ ಮನುಷ್ಯತ್ವೇ
ಪರತ್ವಂ ಚ ಮಹಾತ್ಮನಾಂ ।
ವಿಶೇಷೋ ನವಮೋ ಯೋಗಃ
ಭಕ್ತಿ ರೂಪಃ ಪ್ರಕೀರ್ತಿತಃ ॥ 13 ॥

ಸ್ವ ಕಲ್ಯಾಣ ಗುಣಾನಂತ್ಯ
ಕೃತ್ಸ್ನ ಸ್ವಾಧೀನತಾ ಮತಿಃ ।
ಭಕ್ತ್ಯುತ್ಪತ್ತಿ ವಿವೃದ್ಧ್ಯರ್ಥಾ
ವಿಸ್ತೀರ್ಣಾ ದಶಮೋದಿತಾ ॥ 14 ॥

15 एकादशेऽस्य याथात्म्य-
साक्षात्कारावलोकनम् ।
दत्तमुक्तंविदि प्राप्त्योः
भक्त्येकोपायता तथा ॥ १५ ॥

16 भक्ति शैघ्रयमुपायोक्तिः
अशक्तस्याऽऽत्म निष्ठता ।
तत्प्रकारास्त्वतिप्रीतिः
भक्तेर्द्वादश उच्यते ॥ १६ ॥

17 देह स्वरूपमात्माप्ति
हेतुरात्म विशोधनम् ।
बन्धहेतुर्विवेकश्च
त्रयोदश उदीर्यते ॥ १७ ॥

ಏಕಾದಶೇಽಸ್ಯ ಯಾಥಾತ್ಮ್ಯ-
ಸಾಕ್ಷಾತ್ಕಾರಾವಲೋಕನಂ ।
ದತ್ತಮುಕ್ತಂ ವಿದಿ ಪ್ರಾಪ್ತ್ಯೋಃ
ಭಕ್ತ್ಯೇಕೋಪಾಯತಾ ತಥಾ ॥ 15 ॥

ಭಕ್ತಿ ಶೈಷ್ಠ್ಯಮುಪಾಯೋಕ್ತಿಃ
ಅಶಕ್ತಸ್ಯಾಽಽತ್ಮ ನಿಷ್ಠತಾ ।
ತತ್ಪ್ರಕಾರಾಸ್ತ್ವತಿ ಪ್ರೀತಿಃ
ಭಕ್ತೇರ್ದ್ವಾದಶ ಉಚ್ಯತೇ ॥ 16 ॥

ದೇಹಸ್ವರೂಪಮಾತ್ಮಾಪ್ತಿ-
ಹೇತುಃ ಆತ್ಮ ವಿಶೋಧನಂ ।
ಬಂಧಹೇತುರ್ವಿವೇಕಶ್ಚ
ತ್ರಯೋದಶ ಉದೀರ್ಯತೇ ॥ 17 ॥

18 गुणबन्धविधौ तेषां
कर्तृत्वं तन्निवर्तनं ।
गतित्रय स्वमूलत्वं
चर्तुदश उदीर्यते ॥ १८ ॥

19 अचिन्मिश्राद्विशुद्धाच्च
चेतनात्पुरुषोत्तमः
व्यापनाद्भरणात्स्वाम्यात्
अन्यः पञ्चदशोदितः ॥ १९ ॥

20 देवासुरविभागोक्ति-
पूर्विका शास्त्रवश्यता ।
तत्त्वानुष्ठान विज्ञान
स्थेम्ने षोडश उच्यते ॥ २० ॥

ಗುಣ ಬಂಧ ವಿಧೌ ತೇಷಾಂ
ಕರ್ತೃತ್ವಂ ತನ್ನಿವರ್ತನಂ ।
ಗತಿತ್ರಯ ಸ್ವ ಮೂಲತ್ವಂ
ಚತುರ್ದಶ ಉದೀರ್ಯತೇ ॥ 18 ॥

ಅಚಿನ್ಮಿಶ್ರಾದ್ವಿಶುದ್ಧಾಚ್ಚ
ಚೇತನಾತ್ಪುರುಷೋತ್ತಮಃ ।
ವ್ಯಾಪನಾತ್ ಭರಣಾತ್ ಸ್ವಾಮ್ಯಾತ್
ಅನ್ಯಃ ಪಂಚದಶೋದಿತಃ ॥ 19 ॥

ದೇವಾಸುರ ವಿಭಾಗೋಕ್ತಿ-
ಪೂರ್ವಿಕಾ ಶಾಸ್ತ್ರವಶ್ಯತಾ ।
ತತ್ತ್ವಾನುಷ್ಠಾನ ವಿಜ್ಞಾನ
ಸ್ಥೇಮ್ನೇ ಷೋಡಶ ಉಚ್ಯತೇ ॥ 20 ॥

21 अशास्त्रमासुरं कृत्स्नं
शास्त्रीयं गुणतः पृथक् ।
लक्षणं शास्त्रसिद्धस्य
त्रिधा सप्तदशोदितम् ॥ २१ ॥

22 ईश्वरे कर्तृता बुद्धिः
सत्त्वोपादेयताऽन्तिमे ।
स्वकर्म परिणामश्च
शास्त्रसारार्थ उच्यते ॥ २२ ॥

23 कर्मयोगस्तपस्तीर्थ
दान यज्ञादि सेवनम् ।
ज्ञानयोगो जितस्वान्तैः
परिशुद्धात्मनि स्थितिः ॥ २३ ॥

ಅಶಾಸ್ತ್ರಮಾಸುರಂ ಕೃತ್ಸ್ನಂ
ಶಾಸ್ತ್ರೀಯಂ ಗುಣತಃ ಪೃಥಕ್ ।
ಲಕ್ಷಣಂ ಶಾಸ್ತ್ರ ಸಿದ್ಧಸ್ಯ
ತ್ರಿಧಾ ಸಪ್ತದಶೋದಿತಂ ॥ 21 ॥

ಈಶ್ವರೇ ಕರ್ತೃತಾ ಬುದ್ಧಿಃ
ಸತ್ತ್ವೋಪಾದೇಯತಾನ್ತಿಮೇ ।
ಸ್ವಕರ್ಮಪರಿಣಾಮಶ್ಚ
ಶಾಸ್ತ್ರ ಸಾರಾರ್ಥ ಉಚ್ಯತೇ ॥ 22 ॥

ಕರ್ಮಯೋಗಸ್ತಪಸ್ತೀರ್ಥ
ದಾನ ಯಜ್ಞಾದಿ ಸೇವನಂ ।
ಜ್ಞಾನಯೋಗೋ ಜಿತಸ್ವಾಂತೈಃ
ಪರಿಶುದ್ಧಾತ್ಮನಿ ಸ್ಥಿತಿಃ ॥ 23 ॥

24 भक्तियोगः परैकान्त्य-
प्रीत्या ध्यानादिषु स्थितिः ।
त्रयाणामपि योगानां
त्रिभिरन्योन्य संगमः ॥ २४ ॥

25 नित्यनैमित्तिकानाञ्च
पराराधन रूपिणाम् ।
आत्मदृष्टेस्त्रयोऽप्येते
योगद्वारेण साधकाः ॥ २५ ॥

26 निरस्तनिखिलाज्ञानः
दृष्ट्वाऽऽत्मानं परानुगम् ।
प्रतिलभ्य परां भक्तिं
तयैवाऽऽप्नोति तत्पदं ॥ २६ ॥

ಭಕ್ತಿಯೋಗಃ ಪರೈಕಾನ್ತ್ಯ-
ಪ್ರೀತ್ಯಾ ಧ್ಯಾನಾದಿಷು ಸ್ಥಿತಿಃ ।
ತ್ರಯಾಣಾಮಪಿ ಯೋಗಾನಾಂ
ತ್ರಿಭಿಃ ಅನ್ಯೋನ್ಯ ಸಂಗಮಃ ॥ 24 ॥

ನಿತ್ಯ ನೈಮಿತ್ತಿಕಾನಾಂ ಚ
ಪರಾರಾಧನ ರೂಪಿಣಾಂ ।
ಆತ್ಮದೃಷ್ಟೇಸ್ತ್ರಯೋಽಪ್ಯೇತೇ
ಯೋಗದ್ವಾರೇಣ ಸಾಧಕಾಃ ॥ 25 ॥

ನಿರಸ್ತ ನಿಖಿಲಾಜ್ಞಾನಃ
ದೃಷ್ಟ್ವಾಽಽತ್ಮಾನಂ ಪರಾನುಗಂ ।
ಪ್ರತಿಲಭ್ಯ ಪರಾಂ ಭಕ್ತಿಂ
ತಯೈವಾಽಽಪ್ನೋತಿ ತತ್ಪದಂ ॥ 26 ॥

27 भक्तियोगस्तदर्थी चेत्
समग्रैश्वर्यसाधनम् ।
आत्मार्थी चेत्त्रयोऽप्येते
तत्कैवल्यस्य साधकाः ॥ २७ ॥

28 ऐकान्त्यं भगवत्येषां
समानमधिकारिणां ।
यावत्प्राप्ति परार्थी चेत्
तदेवात्यन्तमश्नुते ॥ २८ ॥

29 ज्ञानी तु परमैकान्ती
तदायत्तात्मजीवनः ।
तत्संश्लेष वियोगैक-
सुखदुःखस्तदेक धीः ॥ २९ ॥

ಭಕ್ತಿಯೋಗಸ್ತದರ್ಥೀ ಚೇತ್
ಸಮಗ್ರೈಶ್ವರ್ಯ ಸಾಧನಂ ।
ಆತ್ಮಾರ್ಥೀ ಚೇತ್ತ್ರಯೋಽಪ್ಯೇತೇ
ತತ್ಕೈವಲ್ಯಸ್ಯ ಸಾಧಕಾಃ ॥ 27 ॥

ಐಕಾನ್ತ್ಯಂ ಭಗವತ್ಯೇಷಾಂ
ಸಮಾನಮಧಿಕಾರಿಣಾಂ ।
ಯಾವತ್ಪ್ರಾಪ್ತಿ ಪರಾರ್ಥೀ ಚೇತ್
ತದೇವಾತ್ಯನ್ತಮಶ್ನುತೇ ॥ 28 ॥

ಜ್ಞಾನೀ ತು ಪರಮೈಕಾನ್ತೀ
ತದಾಯತ್ತಾತ್ಮ ಜೀವನಃ ।
ತತ್ಸಂಶ್ಲೇಷ ವಿಯೋಗೈಕ-
ಸುಖ ದುಃಖಸ್ತದೇಕ ಧೀಃ ॥ 29 ॥

30 भगवद्ध्यानयोगोक्त-
वन्दनस्तुति कीर्तनैः ।
लब्धात्मा तद्गतप्राण-
मनो बुद्धीन्द्रियक्रियः ॥ ३० ॥

31 निज कर्मादि भक्त्यन्तं
कुर्यात्प्रीत्यैव कारितः ।
उपायतां परित्यज्य
न्यसेद्देवे तु तामभीः ॥ ३१ ॥

32 ऐकान्त्यात्यंत दास्यैक-
रतिस्तत्पदमाप्नुयात् ।
तत्प्रधानमिदं शास्त्रं
इति गीतार्थसंग्रहः ॥ ३२ ॥

॥ इति श्रीमद्यामुनमुनिप्रणीतः श्रीमद्भगवद्गीतार्थसंग्रहः सम्पूर्णः ॥

ಭಗವದ್ಧ್ಯಾನಯೋಗೋಕ್ತ-
ವಂದನ ಸ್ತುತಿ ಕೀರ್ತನೈಃ ।
ಲಬ್ಧಾತ್ಮಾ ತದ್ಗತ ಪ್ರಾಣ-
ಮನೋ ಬುದ್ಧೀನ್ದ್ರಿಯ ಕ್ರಿಯಃ ॥ 30 ॥

ನಿಜ ಕರ್ಮಾದಿ ಭಕ್ತ್ಯನ್ತಂ
ಕುರ್ಯಾತ್ ಪ್ರೀತ್ಯೈವ ಕಾರಿತಃ ।
ಉಪಾಯತಾಂ ಪರಿತ್ಯಜ್ಯ
ನ್ಯಸೇದ್ದೇವೇ ತು ತಾಮಭೀಃ ॥ 31 ॥

ಏಕಾನ್ತ್ಯಾತ್ಯನ್ತ ದಾಸ್ಯೈಕ-
ರತಿಸ್ತತ್ಪದಮಾಪ್ನುಯಾತ್ ।
ತತ್ಪ್ರಧಾನಮಿದಂ ಶಾಸ್ತ್ರಂ
ಇತಿ ಗೀತಾರ್ಥ ಸಂಗ್ರಹಃ ॥ 32 ॥

॥ ಇತಿ ಶ್ರೀಮದ್ಯಾಮುನ ಮುನಿ ಪ್ರಣೀತಃ
ಶ್ರೀಮದ್ಭಗವದ್ಗೀತಾರ್ಥ ಸಂಗ್ರಹಃ ಸಂಪೂರ್ಣಃ ॥

नमो नमो यामुनाय
यामुनाय नमो नमः ।
नमो नमो यामुनाय
यामुनाय नमो नमः ॥

शुभमस्तु

ನಮೋ ನಮೋ ಯಾಮುನಾಯ
ಯಾಮುನಾಯ ನಮೋ ನಮಃ ।
ನಮೋ ನಮೋ ಯಾಮುನಾಯ
ಯಾಮುನಾಯ ನಮೋ ನಮಃ ॥

॥ ಆಳವಂದಾರ್ ತಿರುವಡಿಹಳೇ ಶರಣಂ ॥

YAMUNA AND HIS WORKS

Since the works of Nathamuni, the first Srivaishnava Acharya and author, have not come down to us, his grandson Yamuna may be regarded as the earliest of the Srivaishnava philosophers and teachers and so the history of the modern Vaisnavism should commence with Yamunacharya.

Yamuna occupies a unique place among the Srivaishnava Teachers and he, along with his grandfather Nathamuni, had been accorded the central position in the galaxy of teachers. He was the spiritual successor of that great Acharya Nathamuni as he had the privilege of inheriting his grandfather's immeasurable spiritual wealth. Yamuna was Ramanuja's Teacher's Teacher and all the works of Ramanuja bear clear evidence of the great influence of Yamuna's works.

Yamuna was noted for high standards of thought and discussion. By his scholarly works in Sanskrit, he played a vital role in promoting the cause of the Srivaisnava religion and philosophy and achieved phenomenal success in that task.

By his scholarship and wisdom, Yamuna defeated vidvajjana Kolahala or Akki Alwan, the famous court pandit of the Chola King, and got half the kingdom and ruled it with competence. He was a good administrator and a great warrior also. Acharya Ramamisra was responsible for the final spiritual turn in Yamuna's secular life.

In the books written by Yamuna in Sanskrit i.e., Stotraratna, Siddhitraya, Agama Pramanya, Gitartha Sangraha, Chatussloki, the doctrine of Visistadvaita is elucidated well. He wanted to

write many more books but due to his ill health, it was left to Ramanuja to fulfil his desires.

Yamuna's *Stotraratna* is a valuable fountain source of the fund of knowledge relating to the ubhaya vedanta i.e., Sanskrit Vedas and Tamil Prabandham, which expounds the tenets of Srivaisnavism. The works of the later Acharyas like Ramanuja, Kuresha, Parasara Bhatta, Vedanta Desika, bear the stamp of Yamuna. So this indicates that all of them were guided by Yamuna's works. It was the recital of the hymns of Stotraratna by Acharya Mahapurna that attracted Ramanuja into the fold of Yamuna and even Ramanuja's cousin Govinda, on hearing this from Srisailapurna, left Saivism and joined Srivaisnavism.

Stotraratna is a collection of hymns on the Lord. Although it is a hymn of the religious

and devotional importance, it abounds in many philosophical statements. It has the doctrine of surrender or prapatti as its main concern. It brings out very well the agony of the human soul trying to reach the plane of divine existence. The supremacy of Lord Vishnu with Goddess Lakshmi is described in this Stotraratna.

Acharya Peria Achan Pillai, the intellectual stalwart, acknowledged as the prince among glossaries (Vyakhyana Chakravarthy), has written a great commentary on this in Tamil.

Acharya Vedanta Desika reputed to be the Lion of Poets and Logicians, has also brought out a great commentary on this in Sanskrit. According to him, Stotraratna not only brings out the essential teaching of the Visistadvaita that Lord Narayana Himself is the means (upāya), the end (sādhya) and the goal (Prāpya) of all



human endeavour, but also implies the significance of Twin Mantras (Dvaya) held in high esteem by the Srivaisnavas.

Yamuna's Stotraratna and Vedanta Desika's Commentary on it are of substantial value in understanding the Visistadvaita conception of the Supreme Being as associated with his consort Lakshmi and the nature and evolution of the doctrine of surrender to him.

In a small compendium of 32 stanzas called *Gitarthasangraha*, Yamuna has interpreted the Bhagavadgita of Lord Krishna from the view point of a Visistadvaitin. Yamuna learnt this from his Acharya Sri Rama Misra.

Gitarthasangraha is an epitome of the teaching of Bhagavadgita, which is the essence of all the Upanishads. Ramanuja's commentary on the Gita, was inspired and guided by the work of Yamuna, which is quoted as an

authority. Vedanta Desika, in his commentary on Yamuna's work, called Gitarthasangraha-raksha, has brought out the latent points of philosophical and doctrinal value in a detailed and analytical manner.

The central theme of the Gitasastra, is the glorification of Lord Narayana, the Supreme Being. This work explains that the Supreme Being can be realised only through loving devotion (Bhakthi) to Him. Such loving devotion can be acquired and cultivated by three factors i.e., (1) Sincere performance of duties pertaining to one's station in life (Svadharma), (2) correct knowledge (Jnana) regarding one's self that it is ever subordinate to the Lord, and (3) a sense of detachment (vairagya) from all things other than the Supreme Being. According to Yamuna Bhakthi becomes the end (sadhya) and all others the means (sadhanas).

ಸ್ತೋತ್ರರತ್ನ

ಶ್ರೀ ಯಾಮುನರ ದಿವ್ಯಕೃತಿಗಳಲ್ಲಿ ಇದೂ ಒಂದು. ಶರಣಾಗ
ಮಂತ್ರವನ್ನು ಹೇಳುವ ಕಠೋಪನಿಷತ್ತಿನಲ್ಲಿ ಈ ಮಂತ್ರವನ್ನು ಮಂತ್ರರತ್ನ
